ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 27 ಜುಲೈ 6, 1980 ಬೆಲೆ : 50 ಪೈಸೆ

ಗಡಿ ವಿವಾದ ಇತ್ಯರ್ಥಕ್ಕೆ ಸ್ವಾಗತ

ಭಾರತ ಮತ್ತು ಚೀನಾ ದೇಶಗಳ ನಡುವಣ ಹಿಂದಿನ ಮಧುರ ಬಾಂಧವ್ಯವು ಗಡಿವಿವಾದ ತಲೆಎತ್ತಿದ ನಂತರ ವಿಷಮಗೊಂಡಿತು. 1962 ನಂತರ ಇದು ತೀರಾ ವಿಕೋಪಕ್ಕೆ ಹೋಯಿತು. ಹಲವು ವರ್ಷಗಳ ಈ ಧೋರಣೆಯ ವೈಫಲ್ಯತೆ ಅರಿವಾದಾಗ ಎರಡೂ ಸರಕಾರಗಳ ಮಧ್ಯೆ ಮಾತುಕತೆ ನಡೆದು ರಾಯಭಾರಿಗಳನ್ನು ನೇಮಿಸಲಾಯಿತು. 1976ರ ನಂತರ ಪರಸ್ಪರ ಮಾತುಕತೆಗಳು ಪುನರಾರಂಭವಾಗಿ ವಿವಾದಾತ್ಮಕ ಪ್ರಶ್ನೆಗಳನ್ನು ಬದಿಗಿಟ್ಟು ಎರಡು ರಾಷ್ಟ್ರಗಳೂ ಆರ್ಥಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಹಕರಿಸಲು ತೀರ್ಮಾನ ತೆಗೆದುಕೊಂಡವು. ಚೀನಾ ಸರಕಾರದ ಆಮಂತ್ರಣದ ಮೇರೆಗೆ 1978ರಲ್ಲಿ ಜನತಾಪಕ್ಷ ಅಧಿಕಾರದಲ್ಲಿದ್ದಾಗ ಕೇಂದ್ರದ ವಿದೇಶಾಂಗ ಮಂತ್ರಿಯಾಗಿದ್ದ ಶ್ರೀ ವಾಜಪೇಯಿಯವರು ಚೀನಾಕ್ಕೆ ಭೇಟಿಯಿತ್ತರು. ಚೀನಾದ ನಾಯಕರ ಜೊತೆಗೆ ದೀರ್ಘಮಾತುಕತೆ ನಡೆಸಿದರು. ಆದರೆ ಆ ಸಮಯದಲ್ಲೇ ಚೀನಾ ಮತ್ತು ವಿಯೆಟ್ನಾಂ ಘರ್ಷಣೆ ನಡೆದ ಪರಿಣಾಮವಾಗಿ ಮಾತುಕತೆ ಮುಂದುವರಿಯಲಿಲ್ಲ. ಆದರೆ ಅನೇಕ ನಿಯೋಗಗಳು ಭಾರತದಿಂದ ಚೀನಾಕ್ಕೂ, ಚೀನಾದ ನಿಯೋಗಗಳು ಭಾರತಕ್ಕೂ ಬಂದುದರಿಂದ ಪರಸ್ಪರ ವಿಶ್ವಾಸಬೆಳೆಯಲು ಸಾಧ್ಯವಾಯಿತು.

ಈಗ ಎರಡೂ ದೇಶಗಳ ಮಧ್ಯೆ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕಾ ಒಡಂಬಡಿಕೆಗಳು ಆಗುತ್ತಿವೆ. ಇದು ಸ್ವಾಗತಾರ್ಹ. ಇದರ ಜೊತೆಗೆ ಚೀನಾ ನಾಯಕರು ಹಲವು ಸಂದರ್ಭಗಳಲ್ಲಿ ಭಾರತ ಸರಕಾರದ ನಾಯಕರ ಜೊತೆಗೆ ಮಾತನಾಡಿ ಎರಡೂ ದೇಶಗಳ ಸಂಬಂಧಗಳನ್ನು ಉತ್ತಮಪಡಿಸುವುದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಅವರು ಮೇಲಿಂದ ಮೇಲೆ ಕೊಟ್ಟ ಹೇಳಿಕೆಗಳಲ್ಲಿ ಇದು ಸ್ಪಷ್ಟವಾಗಿದೆ.

ಸಂಪಾದಕೀಯ

ಈ ಹಿನ್ನೆಲೆಯಲ್ಲಿ ಚೀನಾದ ಉಪಪ್ರಧಾನಿ ಡೆಂಗ್ ಸಿಯಾವೊ ಪಿಂಗ್‌ರವರು ಭಾರತದ ಪತ್ರಕರ್ತರೊಬ್ಬರಿಗೆ ನೀಡಿದ ಸಂದರ್ಶನವೊಂದರಲ್ಲಿ ಗಡಿವಿವಾದದ ಬಗ್ಗೆ ಹೇಳಿರುವ ವಿಷಯವು ಲೋಕಸಭೆಯಲ್ಲಿ ಎತ್ತಲ್ಪಟ್ಟಾಗ ವಿದೇಶಾಂಗ ಸಚಿವರು ಅದನ್ನು ಸ್ವಾಗತಿಸಿರುವುದು ಗಮನಾರ್ಹವಾಗಿದೆ. ಇದನ್ನು ಚೀನಾದ ವಿದೇಶಾಂಗ ಸಚಿವರು ಭಾರತಕ್ಕೆ ಭೇಟಿಕೊಡುವ ಸಂದರ್ಭದಲ್ಲಿ ಚರ್ಚಿಸಲಾಗುವುದೆಂದು ಸಚಿವರು ಹೇಳಿದ್ದಾರೆ.

ಗಡಿ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಆರಂಭದಿಂದಲೂ ಪ್ರತಿಪಾದಿಸಿದೆ. ಇದರ ಬಗ್ಗೆ ಭಾರತ ಸರಕಾರ ತಳೆದಿರುವ ಈಗಿನ ನಿಲುವನ್ನು ನಾವು ಸ್ವಾಗತಿಸುತ್ತೇವೆ. ಈ ಸಮಸ್ಯೆಯು ಸೌಹಾರ್ದತೆಯಿಂದ ಬಗೆಹರಿಯಲೆಂದು ನಮ್ಮ ಹಾರೈಕೆ. ○

ಕರಾಳಶಾಸನಗಳನ್ನು ವಿರೋಧಿಸಲು

ಉ. ಕ. ಕಾರ್ಮಿಕ ಸಮಾವೇಶದ ಕರೆ

ಕರ್ನಾಟಕ ಅಗತ್ಯಸೇವಾ ಮಸೂದೆಯನ್ನು ತಂದು ಕಾರ್ಮಿಕರ ಸಂಘಟಿಸುವ ಹಕ್ಕುಗಳನ್ನೇ ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುವ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಬೆಳಗಾವಿಯಲ್ಲಿ ಜೂನ್ 21 ಮತ್ತು 22ರಂದು ಸೇರಿದ್ದ ಉತ್ತರ ಕರ್ನಾಟಕ ಕಾರ್ಮಿಕ ಸಂಘಟನೆಗಳ ಸಮಾವೇಶವು ಖಂಡಿಸಿತು. ಸರ್ಕಾರದ ಕಾರ್ಮಿಕ ವಿರೋಧಿ ಕ್ರಮಗಳನ್ನು ಪ್ರತಿಭಟಿಸಲು ಮತ್ತು ರಾಜ್ಯವ್ಯಾಪ್ತಿ ಹೋರಾಟ ಕಾರ್ಯಕ್ರಮ ಯೋಜಿಸಲು ಬೆಂಗಳೂರಿನಲ್ಲಿ ಜುಲೈ 14ರಂದು ನಡೆಯಲಿರುವ ರಾಜ್ಯಮಟ್ಟದ ಸಮಾವೇಶವನ್ನು ಸಂಪೂರ್ಣ ಬೆಂಬಲಿಸಿ, ರಾಜ್ಯಮಟ್ಟದ ಹೋರಾಟದಲ್ಲಿ ಭಾಗವಹಿಸಲು ನಿರ್ಣಯಿಸಲಾಯಿತು. ರಾಜ್ಯ ಸಮಾವೇಶಕ್ಕೆ ಪ್ರತಿನಿಧಿಗಳನ್ನು ಕಳುಹಿಸುವುದು ಮತ್ತು ರಾಜ್ಯ ಸಮಾವೇಶವಾದ ಮೇಲೆ ಉತ್ತರ ಕರ್ನಾಟಕ ಪ್ರದೇಶದ ಸಮ್ಮೇಳನ ನಡೆಸುವುದೆಂದೂ ನಿರ್ಣಯಿಸಲಾಯಿತು. ರಾಜ್ಯದ ಎಲ್ಲಾ ಪ್ರದೇಶಗಳಲ್ಲೂ ಪ್ರಾದೇಶಿಕ ಸಮ್ಮೇಳನಗಳನ್ನು ನಡೆಸಲೂ ರಾಜ್ಯಮಟ್ಟದ ಹೋರಾಟ ಸಮಿತಿಗೆ ಕರೆ ಈಯಲಾಯಿತು. ಜುಲೈ 14ರ ಸಮಾವೇಶದ ತೀರ್ಮಾನಗಳ ಪ್ರಕಾರ ಹೋರಾಟವನ್ನು ನಡೆಸಲೂ ನಿರ್ಣಯಿಸಲಾಯಿತು.

ಬೆಳಗಾವಿಯ ಇಂಡಾಲ್ ಬೀಗಮುದ್ರೆಯನ್ನು ಖಂಡಿಸಿ, ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ; ಪವರ್‌ಲೂಮ್ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ ನಿರ್ಣಯಗಳನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು. ಬೆಳಗಾವಿಯ ಇಂಡಾಲ್ ಕಾರ್ಮಿಕರ ಯೂನಿಯನ್ ಆಫೀಸಿನಲ್ಲಿ ಜರುಗಿದ ಉತ್ತರ ಕರ್ನಾಟಕ ಕಾರ್ಮಿಕ ಸಂಘಟನೆಗಳ ಸಮಾವೇಶಕ್ಕೆ ಹನ್ನೊಂದು ಮುಖ್ಯ ಕಾರ್ಮಿಕ ಸಂಘಟನೆಗಳ 112 ಪ್ರತಿನಿಧಿಗಳು ಬಂದಿದ್ದರು. ಈ ಪೈಕಿ ಆರು ಸಿ. ಐ. ಟಿ. ಯು. ಸಂಘಟನೆಗಳು, 3 ಎ. ಐ. ಟಿ. ಯು. ಸಿ. ಸಂಘಟನೆಗಳು ಮತ್ತು 2 ಸ್ವತಂತ್ರ ಸಂಘಟನೆಗಳಿದ್ದವು. ಕಾಂ. ಆರ್.ಜಿ. ಸ್ಥಳೇಕರ್, ಕಾಂ. ವಿ.ಜಿ.ಕೆ. ನಾಯರ್, ಕಾಂ. ಪವಾರ್ (ಸಿ ಐ. ಟಿ. ಯು.), ಕಾಂ. ವಿಜಯ ಕುಮಾರ್ (ಎಐಟಿಯುಸಿ), ಕಾಂ. ದಿಲೀಪ್ ಕಾಮತ್ ಹಾಗೂ ಇನ್ನು ಅನೇಕ ಮುಖಂಡರುಗಳು ಭಾಗವಹಿಸಿದ್ದರು.

22-6-80ರ ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಬೇರೆಬೇರೆ ಮುಖಂಡರುಗಳು ಭಾಷಣ ಮಾಡಿದರು. ಕಾರ್ಮಿಕವರ್ಗದ ಸೌಹಾರ್ದತೆ ಮತ್ತು ಐಕ್ಯಕಾರ್ಯಾಚರಣೆಯತ್ತ ಈ ಸಮಾವೇಶವು ಗಣನೀಯ ಪಾತ್ರವಹಿಸಲಿದೆ. ●

ಕಾರ್ಮಿಕ ವರ್ಗದ ಐಕ್ಯತೆಗೆ

ಮೈಕೋ ಕಾರ್ಮಿಕರ ಕೊಡುಗೆ

"ಕಾರ್ಮಿಕರು ಕೇವಲ ಬೋನಸ್, ಹೆಚ್ಚಿನ ವೇತನ ಮತ್ತು ಸವಲತ್ತುಗಳಂತ ಆರ್ಥಿಕ ಬೇಡಿಕೆಗಳಿಗಾಗಿಮಾತ್ರ ಹೋರಾಡಿದರೆ ಸಾಲದು. ಇಂದಿನ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಎಷ್ಟೇ ಸವಲತ್ತುಗಳು ದೊರೆತರೂ ಕಾರ್ಮಿಕರ, ದುಡಿಯುವ ಜನರ ಕೊಳ್ಳುವಶಕ್ತಿಯು ದಿನೇದಿನೇ ಕುಗ್ಗುತ್ತದೆ. ಬಡತನ, ದಾರಿದ್ರ್ಯಗಳು ಹೆಚ್ಚುತ್ತವೆ ಆದುದರಿಂದ ಕಾರ್ಮಿಕ ತನ್ನಂತೆಯೇ ಇರುವ ಎಲ್ಲಾ ಕಾರ್ಮಿಕರೊಂದಿಗೆ ಸೇರಿ ಕಾರ್ಮಿಕವರ್ಗದ ಐಕ್ಯತೆಯನ್ನು ಸಾಧಿಸಬೇಕು. ವರ್ಗಹೋರಾಟವನ್ನು ನಡೆಸಬೇಕು. ಉಳಿದ ಶೋಷಣೆಗೊಳಗಾದ ಜನಕೋಟಿಗೆ ಬೆಂಬಲವಿತ್ತು, ಕಾರ್ಮಿಕರು ಮತ್ತು ಹಳ್ಳಿಯ ಬಡವರು ಒಂದಾಗಿ ಶೋಷಣೆಯಿಂದ ಕೂಡಿದ ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆಯನ್ನೇ ಬದಲುಮಾಡಬೇಕು. ಇಂದಿನ ಕೂಲಿ ವ್ಯವಸ್ಥೆಗೆ ಬದಲಾಗಿ, ಎಲ್ಲರೂ ದುಡಿದು ತಿನ್ನುವ ಸಮಾಜವಾದಿ ವ್ಯವಸ್ಥೆ ಬರಬೇಕು" ಇದು ಮಾರ್ಕ್ಸ್‌ವಾದದ ದೃಷ್ಟಿಯಲ್ಲಿ ಕಾರ್ಮಿಕ ವರ್ಗದ ಚಾರಿತ್ರಿಕ ಪಾತ್ರ ಮತ್ತು ಕರ್ತವ್ಯಗಳಾಗಿವೆ.

ಆರ್ಥಿಕವಾದವೇ ತಾಂಡವವಾಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಸಿ. ಐ. ಟಿ. ಯು. ವಿನ ಧೋರಣೆಯು ಆರ್ಥಿಕವಾದವನ್ನು ಹೊಡೆದೋಡಿಸಿ, ಕಾರ್ಮಿಕರಲ್ಲಿ ವರ್ಗಜಾಗೃತಿ ಮೂಡಿಸುವುದೂ, ಮತ್ತು ಸಮಾಜವಾದಿ ಜಾಗೃತಿ ಉಂಟುಮಾಡುವುದೂ ಆಗಿದೆ. ಕಾರ್ಮಿಕ ವರ್ಗವು ತನ್ನ ಚಾರಿತ್ರಿಕ ಜವಾಬ್ದಾರಿಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಾಡಲು ಸಿ. ಐ. ಟಿ. ಯು. ಶ್ರಮಿಸುತ್ತಲಿದೆ ಹೀಗೆ ಮಾಡುವುದರಲ್ಲಿ ಮೊದಲ ಹಂತ ಎಂದರೆ ಒಂದು ಕಾರಖಾನೆಯ ಎಲ್ಲಾ ಕಾರ್ಮಿಕರಲ್ಲಿ ಐಕ್ಯತೆ ತರುವುದು; ಒಂದು ಕಾರಖಾನೆಯ ಹೋರಾಟವೆಂದರೆ ಎಲ್ಲಾ ಕಾರಖಾನೆಯ ಕಾರ್ಮಿಕರ ಹೋರಾಟ ಎಂಬ ತಿಳುವಳಿಕೆಯನ್ನು ತಂದು ಸೌಹಾರ್ದ ಕಾರ್ಯಾಚರಣೆಗಿಳಿಸುವುದು; ಒಬ್ಬ ಕಾರ್ಮಿಕನ ಹೋರಾಟವೆಂದರೆ ಎಲ್ಲಾ ಕಾರ್ಮಿಕರ ಹೋರಾಟ ಎಂಬ ಅಂಶವನ್ನು ಕಾರ್ಯಾಚರಣೆಗೆ ತರುವುದೇ ಆಗಿದೆ.

ಇತ್ತೀಚೆಗೆ ಕೆಲವು ತಿಂಗಳುಗಳ ಹಿಂದೆ ಬೆಂಗಳೂರಲ್ಲಿ ನಡೆದ ಮೈಕೋ ಕಾರ್ಮಿಕರ ದೀರ್ಘ ಕಾಲದ ಹೋರಾಟದ ಸಂದರ್ಭದಲ್ಲಿ ಬೆಂಗಳೂರು ಬಂದ್' ಕಾರ್ಯಾಚರಣೆಯೂ ಸೇರಿದಂತೆ ನಗರದ ಎಲ್ಲಾ ಕಾರ್ಮಿಕರೂ, ರಾಜ್ಯದ ಬಹಳಷ್ಟು ಕಾರ್ಮಿಕರೂ ಸೌಹಾರ್ದ ಬೆಂಬಲ ನೀಡಿದ್ದುವು. ಮೈಕೋ ಕಾರ್ಮಿಕರ ಒಗ್ಗಟ್ಟು, ಹೋರಾಟಗಾರ ಮುಖಂಡತ್ವ ಮತ್ತು ಸೌಹಾರ್ದ ಬೆಂಬಲಗಳ ಪರಿಣಾಮವಾಗಿ, ಈ ಹೋರಾಟವು ಯಶಸ್ವೀ ಮುಕ್ತಾಯವಾಯಿತು.

ಹೋರಾಟದ ಅನುಭವದಿಂದ ಇದೀಗ ಮೈಕೋ ಕಾರ್ಮಿಕರು ಸೌಹಾರ್ದ ಕಾರ್ಯಕ್ರಮದಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಹೋರಾಟದಲ್ಲಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರಿಗೆ ಸುಮಾರು ಸಾವಿರ ರೂಪಾಯಿಗಳಷ್ಟು, ಸಂಯುಕ್ತ ಕರ್ನಾಟಕ ನೌಕರರಿಗೆ ಸುಮಾರು ರೂ. 5000 ದಷ್ಟು; ಪೋಲೀಸ್ ದಬ್ಬಾಳಿಕೆಗೊಳಗಾದ ಸಂಸೆ ಟೀ ತೋಟದ ಕಾರ್ಮಿಕರ ಸಹಾಯಕ್ಕೆ ಸುಮಾರು 500 ರೂಪಾಯಿ ಸಹಾಯವನ್ನಿತ್ತ ಮೈಕೋ ಕಾರ್ಮಿಕರು ಇದೀಗ ನೂರೈವತ್ತು ಕ್ವಿಂಟಲ್ಲಿಗಿಂತಲೂ ಜಾಸ್ತಿ ಅಕ್ಕಿಯನ್ನು ಸಂಗ್ರಹಿಸಿ ದೀರ್ಘಕಾಲದಿಂದ ಹೋರಾಟದಲ್ಲಿರುವ ಐಟಿಸಿ ಕಾರ್ಮಿಕರಿಗೆ ಸಹಾಯಮಾಡಲು ಮುಂದೆ ಬಂದಿರುವುದು ಶ್ಲಾಘನೀಯ. ಖರ್ಚಿಗಾಗಿ ಪುಡಿಕಾಸು ಮತ್ತು ಕುಟುಂಬವೊಂದಕ್ಕೆ ವಾರಕ್ಕೆ 5ರಿಂದ 7 ಕೆ. ಜಿ. ತನಕ ಅಕ್ಕಿ ಹಂಚುವ ಈ ಕಾರ್ಯಕ್ರಮದಲ್ಲಿ ಮೊದಲ ವಾರ 75 ಮೂಟೆಯಷ್ಟು ಅಕ್ಕಿಯನ್ನು ಹಂಚಲಾಗಿದೆ. ಐಟಿಸಿ ಕಾರ್ಮಿಕರ ಹೋರಾಟ ನಡೆ

(ಕಡೇ ಪುಟ ನೋಡಿ)

ಪ್ರತ್ಯೇಕವಾದಿ ಸ್ವರೂಪದ ಅಸ್ಸಾಂ ಚಳವಳಿ ಅಲ್ಪಮತೀಯರ ವಿರುದ್ಧ ನಡೆಯುತ್ತಿದೆ

ಅಸ್ಸಾಂ ಚಳವಳಿದ ಮುಂದಾಳುಗಳು ತಮ್ಮ ಆಂದೋಳನವು ವಿದೇಶೀಯರ ವಿರುದ್ಧವಾಗಿದೆಯೇ ಹೊರತು, ಭಾರತದ ವಿರೋಧಿ ಅಥವಾ ಅಲ್ಪ ಮತೀಯರ ವಿರೋಧಿಯಲ್ಲ ಎಂದು ಹೇಳಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಾ ಸಂಘ (ಆರ್.ಎಸ್.ಎಸ್.) ಮತ್ತು ಅದರ ರಾಜಕೀಯ ಮುಖವಾಡವಾಗಿರುವ ಭಾರತೀಯ ಜನತಾಪಕ್ಷ (ಮೊದಲ ಜನಸಂಘ) ಅಸ್ಸಾಂ ಚಳವಳಿವು 'ರಾಷ್ಟ್ರೀಯ' ವಾದುದೂ 'ದೇಶಪ್ರೇಮ' ಉಳ್ಳದ್ದೂ ಎಂದೆಲ್ಲಾ ತಮ್ಮ ಉದಾರ ಶಿಫಾರಸುಗಳನ್ನು ನೀಡುತ್ತಿವೆ.

ಅಸ್ಸಾಂನ ಆಂದೋಳನವು ಅಲ್ಪ ಮತೀಯರ ಹಾಗೂ ಅಲ್ಪ ಭಾಷೆಯವರ ವಿರುದ್ಧವಾಗಿರುವುದೆಂದೂ ಪ್ರತ್ಯೇಕತಾವಾದವೇ ಅದರ ಗುರಿ ಎಂದೂ ಅದರ ನಿರ್ದೇಶನಗಳಿಂದಲೇ ಸ್ಪಷ್ಟವಾಗಿ ತಿಳಿದುಬರುವುದು.

ಈ ಕೆಳಗೆ ಪೂರ್ಣವಾಗಿ ಪ್ರಕಟಿಸಿದ ಆಂದೋಳನದ 35-ಅಂಶ ಕಾರ್ಯಕ್ರಮವು ಚಳವಳಿಗಾರರ ಭೂಗತ ಕೇಂದ್ರ ಕಾರ್ಯಾಲಯದಿಂದ ದೊರೆತುದಾಗಿದೆ. ಈ ಕಾರ್ಯಕ್ರಮವನ್ನು ಈಶಾನ್ಯ ಪ್ರದೇಶದ ವಿದ್ಯಾರ್ಥಿ ಸಂಘವು(NERSU) ತನ್ನ ಇತ್ತೀಚಿನ ಸಭೆಯೊಂದರಲ್ಲಿ ತಯಾರು ಮಾಡಿತು. ಅಮೇರಿಕದ ಏಜಂಟರುಗಳಿಗೆ ಗೆಳೆತನವಿರುವ ಕೆಲವು ಜನರು ಈ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿದರು. ಸಾಮ್ರಾಜ್ಯವಾದಿ ಏಜಂಟರುಗಳು ಭಯೋತ್ಪಾದನೆ ಹಾಗೂ ಬುಡಮೇಲು ಕೃತ್ಯಗಳಿಂದ ಈ ಪ್ರದೇಶದಲ್ಲಿ ಅಸ್ಥಿರತೆಯನ್ನುಂಟುಮಾಡಲು ಈ ಕಾರ್ಯಕ್ರಮವು ಉದ್ದೇಶಿಸಿದೆ ಎಂದು ಜಗಜ್ಜಾಹಿರವಾಗುವುದು.

ಇಡೀ ಈಶಾನ್ಯ ಪ್ರದೇಶಕ್ಕೆಂದು ರೂಪಿಸಿದ ಈ ಕಾರ್ಯಕ್ರಮವನ್ನು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಸ್ವಲ್ಪ ತಿದ್ದುಪಡಿ ಮಾಡಿಕೊಂಡು ಅಸ್ಸಾಂ ರಾಜ್ಯಾದ್ಯಂತ ಚಳವಳಿಯ ಮುಂದಾಳುಗಳು ಪ್ರಸಾರ ಮಾಡುತ್ತಿದ್ದಾರೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘವು (AASU) ಈ ಕಾರ್ಯಕ್ರಮವನ್ನು ಬಹಿರಂಗವಾಗಿಯೇ ಪ್ರಸಾರ ಮಾಡುತ್ತಿದೆ.

ಕಾರ್ಯಕ್ರಮವು ಸ್ಪಷ್ಟವಾಗಿದೆ. ಅದಕ್ಕೆ ಯಾವ ವಿವರಣೆಯೂ ಅಗತ್ಯವಿಲ್ಲ. ಅದರ ಪೂರ್ಣಪಾಠ ಹೀಗಿದೆ:

1. ಒಂದೇ ನಾಯಕತ್ವದಲ್ಲಿ ಮತ್ತು ಕಟ್ಟುನಿಟ್ಟಿನ ಶಿಸ್ತು, ರೀತಿ ನೀತಿಗಳಿಗನುಗುಣವಾಗಿ ಭೂಗತ ಕೇಂದ್ರ ಕಾರ್ಯಾಲಯದ ಆಧಾರದಲ್ಲಿ ಹಲವು ಹಂತಗಳಲ್ಲಿ ಗುಪ್ತ ಸಮಾಜ ಒಂದನ್ನು ರಚಿಸುವುದು.

2. ಹಣಸಂಗ್ರಹ ಮಾಡುವುದು.

3. ಹೊಸ ಸಮಾಜದ ಹಿತಾಸಕ್ತಿಯ ವಿರುದ್ಧ ಕೆಲಸ ಮಾಡಿದ್ದ ಅಸ್ಸಾಂನ ರಾಜಕಾರಣಿಗಳನ್ನೂ, ಸರಕಾರಿ ಅಧಿಕಾರಿಗಳನ್ನೂ, ಶೋಷಕರನ್ನೂ, ಮತ್ತಿಂತಹವರನ್ನೂ ಪತ್ತೆ ಹಚ್ಚಬೇಕು.

4. ಅಸ್ಸಾಂನವರಲ್ಲದ ರಾಜಕಾರಣಿಗಳನ್ನೂ, ದಳ್ಳಾಳಿಗಳನ್ನೂ, ಸರಕಾರಿ ಅಧಿಕಾರಿಗಳನ್ನೂ, ಶೋಷಕರನ್ನೂ, ಮತ್ತಿಂತಹವರನ್ನೂ ಪತ್ತೆ ಹಚ್ಚಬೇಕು.

5. ಇವರ ಸ್ಥಳೀಯ ವಿಚಾರಣೆಗೆ ಒಂದು ತಾರೀಕನ್ನು ನಿರ್ಧರಿಸಬೇಕು.

6. ನಾಗಾ, ಮಿಜೋ, ಮಣಿಪುರಿ, ಮೇಘಾಲಯ, ಅರುಣಾಚಲ, ತ್ರಿಪುರಿ ಜನರೊಂದಿಗೆ ಮತ್ತು ಈ ಪ್ರದೇಶಗಳ ಇತರ ಎಲ್ಲಾ ಸ್ಥಳೀಯ ಜನರೊಂದಿಗೆ ಸೌಹಾರ್ದತೆಯ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಅವರೊಂದಿಗೆ ಕೈಕೈಕೂಡಿ ಮುನ್ನಡೆಯಬೇಕು.

7. ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ, ಇತ್ಯಾದಿ ರಾಜ್ಯಗಳೊಂದಿರುವ ಗಡೀ ವಿವಾದಗಳನ್ನು ಪರಸ್ಪರ ತಿಳುವಳಿಕೆ ಮತ್ತು ಸಹಕಾರದಿಂದ ಬಗೆಹರಿಸಬೇಕು.

8. ಬಾನಾರ್‌ಪುರ್‌ನಿಂದ ಲುಮ್‌ಡಿಂಗ್ ನಡುವಿನ ರೈಲ್ವೆದಾರಿಯನ್ನು ಕಡಿದೊಗೆಯಬೇಕು; ಉತ್ತರ ನಾಚಾರ್ ಜಿಲ್ಲೆಯನ್ನು ರಸ್ತೆದಾರಿಯಿಂದ ಸಂಪರ್ಕಿಸಬೇಕು.

9. ನಾಚಾರ್ ಜಿಲ್ಲೆಯನ್ನು ಅಸ್ಸಾಂ ಭೂಪಟದಿಂದ ತೆಗೆದುಹಾಕಬೇಕು. ಅಸ್ಸಾಂನಲ್ಲಿರುವ ಬಂಗಾಳಿ ಜನಸಂಖ್ಯೆಯನ್ನು ಅಲ್ಲಿಗೆ ಕಳುಹಿಸಿ, ಅಲ್ಲಿನ ಅಸ್ಸಾಂ ಜನಸಂಖ್ಯೆಯನ್ನು ಮರಳಿ ಬರಮಾಡಿಕೊಳ್ಳಬೇಕು.

10. ಲುಮ್‌ಡಿಂಗನ್ನು ಎಲ್ಲಾ ಬದಿಗಳಿಂದ ಪ್ರತ್ಯೇಕಿಸಬೇಕು

11. ಅಸ್ಸಾಂನ ಮುಸ್ಲಿಮರು ಬಂಗಾಳಿ ಮುಸ್ಲಿಮರೊಂದಿಗೆ ಧರ್ಮದ ಹೆಸರಿನಲ್ಲಿ ಹೊಂದಿರುವ ಸಂಬಂಧವನ್ನು ಕಡಿದುಕೊಳ್ಳಬೇಕು.

12. ಬಾಂಗ್ಲಾದೇಶದ ಮುಸ್ಲಿಮರು ಅಸ್ಸಾಂನ್ನು ಒಂದು ಮುಸ್ಲಿಂ ರಾಜ್ಯವನ್ನಾಗಿ ಮಾಡುವ ಯೋಚನೆಯನ್ನು ಕೈ ಬಿಡಬೇಕು. ಅದರ ವಿರುದ್ಧ ಆರ್.ಎಸ್.ಎಸ್. ನವರು ಚಟುವಟಿಕೆಗಳನ್ನು ಮತ್ತು ಅಲಿಘರ್, ಜಮ್‌ಷಡ್‌ಪುರ್, ನಾಡಿಯಾ ಮುಂತಾದ ಕಡೆಗಳಲ್ಲಿ ಇತ್ತೀಚೆಗೆ ಸಂಭವಿಸಿದ ಗಲಭೆಗಳನ್ನು ಅವರು ಮರೆಯಬಾರದು.

13. ಬಂಗಾಳಿ ಹಿಂದೂಗಳು ಅಸ್ಸಾಂನ್ನು 'ಬೃಹತ್ತರ ಬಾಂಗ್ಲಾ'ವನ್ನಾಗಿ ಮಾಡುವ ಯೋಚನೆಯನ್ನು ಕೈಬಿಡಬೇಕು.

14. ಬಂಗಾಳಿ ರಾಜಕಾರಣಿಗಳು (ಹಿಂದೂಗಳು ಮತ್ತು ಮುಸ್ಲಿಮರು) ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡಬಾರದು.

15. ರಾಜ್ಯ ಸರಕಾರಿ ಕಚೇರಿಗಳಲ್ಲಿ ಬಂಗಾಳಿಗಳನ್ನು ನೇಮಕಮಾಡುವುದು ನಿಲ್ಲಬೇಕು.

16. ರೈಲ್ವೆ, ಬ್ಯಾಂಕು, ವಿಮೆ, ಅಂಚೆತಂತಿ, ಚಹಾ ಕೈಗಾರಿಕೆ, ತೈಲೋದ್ಯಮ (ONGC), ಆಡಿಟ್ ಮತ್ತು ಜನರಲ್ (A G.) ಮತ್ತು ಖಾಸಗಿ ಸಂಸ್ಥೆಗಳಲ್ಲಿರುವ ಬಂಗಾಳಿ ನೌಕರರ ಬುಡಕೀಳಬೇಕು.

17. ವಿಶ್ವವಿದ್ಯಾನಿಲಯದಲ್ಲಿ, ಕಾಲೇಜುಗಳಲ್ಲಿ ಮತ್ತು ಇತರ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಂಗಾಳಿ ವಿದ್ಯಾರ್ಥಿಗಳ ಬುಡಕೀಳಬೇಕು.

18. ಬಂಗಾಳಿ ಅಂಗಡಿಗಳಿಂದ ಸಾಮಾನುಗಳನ್ನು ಕೊಂಡುಕೊಳ್ಳುವುದನ್ನು ನಿಲ್ಲಿಸಬೇಕು ಮತ್ತು ಬಂಗಾಳಿಗಳಿಗೆ ಅವಶ್ಯಕ ಸಾಮಗ್ರಿಗಳ ಮಾರಾಟವನ್ನು ನಿಲ್ಲಿಸಬೇಕು

19. ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಹದಗೆಡಿಸಬೇಕು.

20 ಹಳೆಯ ನಿವಾಸಿಗಳನ್ನು ಎಬ್ಬಿಸಬಾರದು.

21 ಸಿನೆಮಾ ಮಂದಿರಗಳಲ್ಲಿ, ವ್ಯಾಪಾರಕೇಂದ್ರಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ, ಆಟೋಟಗಳಲ್ಲಿ ಅವರಿಗೆ ತೊಂದರೆ ಕೊಡಬೇಕು.

22. ಕಲ್ಕತ್ತ ಮೂಲವಾದ ವಾರ್ತಾಪತ್ರಗಳನ್ನು ಅಸ್ಸಾಂನಲ್ಲಿ ಪ್ರಸಾರ ಮಾಡಲು ಬಿಡಕೂಡದು.

23. ಅಸ್ಸಾಂನ ಸಿನೆಮಾ ಮಂದಿರಗಳಲ್ಲಿ ಬಂಗಾಳಿ ಸಿನೆಮಾಗಳನ್ನು ಪ್ರದರ್ಶಿಸಲು ಬಿಡಬಾರದು.

24. ಬಂಗಾಳಿ ಪ್ರದೇಶಗಳಲ್ಲಿ, ಬಾಂಗ್ಲಾದೇಶ, ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ ಇವುಗಳ ಗಡಿಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ, ನಗರಗಳಲ್ಲಿ ಅಸ್ಸಾಮಿ ಪೋಲೀಸ್ ಸಿಬ್ಬಂದಿಗಳನ್ನು ಕಳುಹಿಸಬೇಕು.

25. ಅಸ್ಸಾಮಿ ಪೋಲೀಸ್ ಸಿಬ್ಬಂದಿಗಳನ್ನು ಸರಕಾರಿ ಕಚೇರಿಗಳಿಗೂ, ರೈಲ್ವೆ ಖಾತೆಗಳಿಗೂ, ಪೋಲೀಸ್ ಠಾಣೆಗಳಿಗೂ ಮತ್ತು ರಕ್ಷಣಾ ಪಡೆಗಳಿಗೂ ಕಳುಹಿಸಬೇಕು.

26. ಸಾಚಾರ್ ಜಿಲ್ಲೆಯಲ್ಲಿ ಸೇವೆಸಲ್ಲಿಸುತ್ತಿರುವ ಎಲ್ಲಾ ಅಸ್ಸಾಮಿ ನೌಕರರ ಬದಲಿಗೆ ಬ್ರಹ್ಮಪುತ್ರಾ ಕಣಿವೆಯಲ್ಲಿ ಸೇವೆಸಲ್ಲಿಸುತ್ತಿರುವ ಬಂಗಾಳಿ ನೌಕರರನ್ನು ಈ ಕೂಡಲೇ ನೇಮಿಸಬೇಕು.

27. ಅಸ್ಸಾಂ ಪೋಲೀಸ್ ಪಡೆಗೆ ಮತ್ತು ಸರಕಾರಿ ಸೇವೆಗೆ ಬಂಗಾಳಿಗಳನ್ನು ನೇಮಿಸುವುದನ್ನು ಇನ್ನು ಮುಂದೆ ನಿಲ್ಲಿಸಬೇಕು.

28. ಎಲ್ಲಾ ಅನಧಿಕೃತ ಸಿಬ್ಬಂದಿಗಳನ್ನು ಹೊರದಬ್ಬಬೇಕು ಮತ್ತು ಎಲ್ಲಾ ಅನಧಿಕೃತ ಕಟ್ಟಡಗಳನ್ನು ಕೆಡವಬೇಕು.

29. ಚಹಾ, ಕಲ್ಲಿದ್ದಲು, ಪ್ಲೈವುಡ್, ಕಚ್ಚಾತೈಲ, ಸೆಣಬು, ಇತ್ಯಾದಿ ಕೈಗಾರಿಕೆಗಳ ಆಡಳಿತವನ್ನು ರಾಜ್ಯ ಸರಕಾರ ಕೈಗೊಳ್ಳಬೇಕು.

30. ವಿದೇಶಿ ಹಿಂದೂಗಳನ್ನು ಮೇಘಾಲಯದ ದಾವ್ಕಿ ಪೋಲೀಸ್ ಠಾಣೆಯ ಮೂಲಕ ಮತ್ತು ಮುಸ್ಲಿಮರನ್ನು ಗೋಲಕ್‌ಗಂಜ್ ಪೋಲೀಸ್ ಠಾಣೆಯ ಮೂಲಕ ಹೊರಹಾಕಬೇಕು.

31. ವ್ಯಾಪಾರ, ಕಂಟ್ರಾಕ್ಟ್ ವಹಿಸಿಕೊಳ್ಳಲು ಮತ್ತು ಕೈಗಾರಿಕೆಗಳಲ್ಲಿ, ಕಾರ್ಖಾನೆಗಳಲ್ಲಿ, ಮಿಲ್ಲುಗಳಲ್ಲಿ, ಮತ್ತಿತರ ಕಡೆಗಳಲ್ಲಿ ಕೆಲಸಮಾಡಲು ಸ್ಥಳೀಯ ಜನರು ಮುಂದೆ ಬರಬೇಕು.

32. ಎಲ್ಲಾ ಗುಡಿಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಬೇಕು.

33. ಸ್ತ್ರೀಯರು ಮತ್ತು ಪುರುಷರು ಅವರ ಸಾಂಪ್ರದಾಯಿಕ ಉಡುಪುಗಳನ್ನೇ ತೊಡಬೇಕು.

34. ನಾವು ಥೈ, ಬೌದ್ಧ ಸಂಸ್ಕೃತಿಯ ಸಮಾಜಗಳೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳಬೇಕು.

35. ಕಲ್ಕತ್ತ ಮತ್ತು ನವದೆಹಲಿಯವರಿಗೆ ನಾವು ಹೇಳಬೇಕು: ನಮ್ಮ ಜೀವನದ ಕನಿಷ್ಟ ಅಗತ್ಯತೆಗೆ ನಿಮ್ಮಿಂದ ನಮಗೆ ಬೇಕಾದುದು ಕೇವಲ ಉಪ್ಪು ಮತ್ತು ನಮ್ಮಿಂದ ನಿಮಗೆ ಚಹಾ, ಕಲ್ಲಿದ್ದಲು, ಕಚ್ಚಾತೈಲ, ಪ್ಲೈವುಡ್, ಸೆಣಬು, ಇತ್ಯಾದಿಗಳೆಲ್ಲಾ ಬೇಕಾಗುವುದು ಎಂದು. ಜಗತ್ತಿನಲ್ಲಿ ಅಸ್ಸಾಮಿಗಳು ತಬ್ಬಲಿಗಳಲ್ಲ ಎಂಬುದನ್ನು ನಾವು ತೋರಿಸಿಕೊಡಬೇಕು.

(ಸಾಧಾರ: ಪೀಪಲ್ಸ್ ಡೆಮಾಕ್ರಸಿ, ನವದೆಹಲಿ: 8-6-80)

○

ಮಹಿಳೆಯ ಮೇಲಿನ ಅತ್ಯಾಚಾರ - ಖಂಡನೆ

ಕೋಲಾರ ಜಿಲ್ಲೆ ಚಿಂತಾಮಣಿಯಲ್ಲಿ ತಾರೀಖು 30-6-80ರಂದು ಇದೇ ತಾಲ್ಲೂಕು ಕೈವಾರ ಹೋಬಳಿ ವಲ್ಲಗಟ್ಟ ಹಳ್ಳಿಯ ನಿವಾಸಿ ನಾರಾಯಣಸ್ವಾಮಿ ಮತ್ತು ಆತನ ಹೆಂಡತಿಯಾದ ನಾಗಮ್ಮ ಸೌದೆ ಕಡೆಯಲು ಗುಡ್ಡಕ್ಕೆ ಹೋಗಿದ್ದಾಗ ಅದೇ ಗುಡ್ಡಕ್ಕೆ ವಿಹರಿಸಲು ಹೋಗಿದ್ದ ಚಿಂತಾಮಣಿಯ ಪುಂಡ ಹುಡುಗರು ಗಂಡನ ಎದುರಿನಲ್ಲಿಯೇ ನಾಗಮ್ಮನ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದರು. ಆಗ ಪ್ರತಿಭಟಿಸಿದ ಗಂಡನನ್ನು ಅವರು ತಂದಿದ್ದ ಹಗ್ಗದಿಂದಲೇ ಕಟ್ಟಿಹಾಕಿ ನಾಗಮ್ಮನನ್ನು ಒಂದು ಪೊದೆ ಮರೆಗೆ ತೆಗೆದುಕೊಂಡು ಹೋಗಿ ಒಬ್ಬರಾದ ಮೇಲೆ ಒಬ್ಬರಂತೆ 9 ಜನ ಗೂಂಡಾಗಳು ಅತ್ಯಾಚಾರ ಮಾಡಿದ್ದಾರೆ.

ಅತ್ಯಾಚಾರಕ್ಕೆ ಒಳಗಾದ ನಾಗಮ್ಮನನ್ನು ಸರಕಾರಿ ಆಸ್ಪತ್ರೆಗೆ ಕರೆತರಲಾಗಿ ಅಲ್ಲಿನ ಮಹಿಳಾ ವೈದ್ಯರಾದ ಡಾ॥ ಸಾವಿತ್ರಮ್ಮನವರು ಅಸಭ್ಯವಾಗಿ ವರ್ತಿಸಿ ಸರಿಯಾದ ಚಿಕಿತ್ಸೆ ಕೊಡದೆ ಹಾಗೂ ದಾಖಲೆ ಸಹ ಮಾಡಿಕೊಳ್ಳದೆ, ಹಿಂದಕ್ಕೆ ಕಳುಹಿಸಿದ್ದಾರೆ.

ಈ ಎಲ್ಲಾ ಅತ್ಯಾಚಾರ ಅನಾಚಾರವನ್ನು ಪ್ರತಿಭಟಿಸಿ ತಾರೀಖು 2-7-80ರಂದು ಚಿಂತಾಮಣಿಯಲ್ಲಿ ಎಸ್. ಎಫ್. ಐ., ಕರ್ನಾಟಕ ದಲಿತ ಮಹಿಳಾ ವಿಮೋಚನಾ ಸಮಿತಿ ಚಿಂತಾಮಣಿ ಶಾಖೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಚಿಂತಾಮಣಿ ಶಾಖೆ ಹಾಗೂ ಸಿ. ಪಿ. ಐ. (ಎಂ) ಕಾರ್ಯಕರ್ತರು ನಗರದಲ್ಲಿ ಮೆರವಣಿಗೆ ನಡೆಸಿದರು. ಇದರಲ್ಲಿ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ "ದಲಿತರ ಮೇಲೆ ನಡೆದ ದೌರ್ಜನ್ಯಕ್ಕೆ ಧಿಕ್ಕಾರ" ನಾಗಮ್ಮನ ಮೇಲೆ ಅತ್ಯಾಚಾರಮಾಡಿದ ಪುಂಡರಿಗೆ ಶಿಕ್ಷೆಯಾಗಲಿ" ಎಂಬ ಘೋಷಣೆಗಳೊಂದಿಗೆ ಚಿಂತಾಮಣಿ ರೂರಲ್ ಪೋಲೀಸ್ ಠಾಣೆಗೆ ನಡೆದು ಇನ್ನು ಮೂರು ದಿನಗಳೊಳಗಾಗಿ ಉಳಿದಿರುವ ಅಪರಾಧಿಗಳನ್ನು ಬಂಧಿಸದಿದ್ದರೆ ರಾಜ್ಯಾದ್ಯಂತ ತೀವ್ರ ಚಳುವಳಿ ಹೂಡುವುದಾಗಿ ಎಚ್ಚರಿಕೆ ಕೊಟ್ಟಿದ್ದಾರೆ. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ಡಾ॥ ಸಾವಿತ್ರಮ್ಮನವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಒತ್ತಾಯಿಸಿದರು.

ಹಾಗೂ ಚಿಂತಾಮಣಿಯಲ್ಲಿ ತಾ. 6-7-80ರ ಭಾನುವಾರ ದಲಿತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

○

ಆರ್ಥಿಕ ಸಮೀಕ್ಷೆ:

ಕೇಂದ್ರ ಮುಂಗಡಪತ್ರ-ಹೊಸ ಕರಭಾರ ಮತ್ತು ಕೊರತೆ

ಆರ್. ಚಂದ್ರ

ಸಿಹಿಸವರಿದ ಕಹಿಗುಳಿಗೆ:

ಕೇಂದ್ರ ಹಣಕಾಸು ಮಂತ್ರಿ ಆರ್. ವೆಂಕಟರಾಮನ್ 1980-81ರ ಸಾಲಿನ ತಮ್ಮ ಪ್ರಥಮ ಮುಂಗಡ ಪತ್ರವನ್ನು ಬಹಳ ಜಾಣ್ಮೆಯಿಂದ ಮಂಡಿಸಿದ್ದಾರೆ! ತೋರಿಕೆಗೆ ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಜನರಿಗೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆಗಳಲ್ಲಿ ಸ್ವಲ್ಪ ರಿಯಾಯತಿ ನೀಡಿದ್ದಾರೆ ನಿಜ. ಆದರೆ ಜೊತೆಗೇ ಆರ್ಥಿಕ ಪುನರುಜ್ಜೀವನಕ್ಕಾಗಿ ಉಳಿತಾಯ ಮತ್ತು ಬಂಡವಾಳ ಹೂಡುವಿಕೆಯನ್ನು ಪ್ರೋತ್ಸಾಹಿಸುವ ನೆಪದಲ್ಲಿ ಶ್ರೀಮಂತವರ್ಗಕ್ಕೆ–ಭೂಮಾಲಕರಿಗೆ, ಬಂಡವಾಳಗಾರರಿಗೆ ಉದಾರ ರಿಯಾಯತಿಗಳನ್ನು ನೀಡಿದ್ದಾರೆ. ತಮ್ಮ ಮುಂಗಡ ಪತ್ರದಲ್ಲಿ ನಿರೀಕ್ಷೆಗಿಂತ ಕಡಿಮೆ ಕರಭಾರ ಮತ್ತು ಕೊರತೆ ತೋರಿಸಿರುವುದಾಗಿ ಸಮಾಧಾನ ಹೇಳಿದ್ದಾರೆ ಪರಿಣಾಮವಾಗಿ ಬೆಲೆಗಳು ಇಳಿಯದಿದ್ದರೂ ಏರಲಾರವು ಎಂದು ಆಶ್ವಾಸನೆ ಕೊಟ್ಟಿದ್ದಾರೆ. ವ್ಯಾಪಾರ ವಾಣಿಜ್ಯ ಹಾಗೂ ಕೈಗಾರಿಕಾ ವಲಯಗಳು ಮುಂಗಡ ಪತ್ರವನ್ನು ಮುಕ್ತಕಂಠದಿಂದ ಸ್ವಾಗತಿಸಿವೆ. ಸ್ವಾತಂತ್ರ್ಯೋತ್ತರದಲ್ಲಿ ಈ ಮುಂಗಡ ಪತ್ರವು ಅತ್ಯುತ್ತಮವಾದುದೆಂದು ಇಂದಿರಾ ಕಾಂಗ್ರೆಸ್‌ನ ನೂತನ ಪ್ರಧಾನ ಕಾರ್ಯದರ್ಶಿ ಸಂಜಯ ಗಾಂಧಿ ಹೊಗಳಿದ್ದಾರೆ!

ಆದರೆ, ಮುಂಗಡಪತ್ರವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಅದು ಸಿಹಿಸವರಿದ ಕಹಿಗುಳಿಗೆ ಎಂದು ಸ್ಪಷ್ಟವಾಗುವುದು. ಭಾರೀ ಬಹುಮತ ಪಡೆದು ಕೇಂದ್ರದಲ್ಲಿಯೂ ಹೆಚ್ಚಿನ ರಾಜ್ಯಗಳಲ್ಲಿಯೂ ಇತ್ತೀಚೆಗೆ ಅಧಿಕಾರಕ್ಕೆ ಬಂದ ಇಂದಿರಾ ಸರಕಾರ ತನ್ನ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಮಾಡಿದ ಸರ್ಕಸ್ ಎಂದು ತಿಳಿದು ಬರುವುದು.

ಪೆಟ್ರೋಲಿಯಂ ಪದಾರ್ಥಗಳ ಬೆಲೆಏರಿಕೆ	:	ರೂ.	2500 ಕೋಟಿ
ರಸಗೊಬ್ಬರಗಳ ಬೆಲೆಏರಿಕೆ	:	ರೂ.	500 "
ರೈಲ್ವೆ ಸಾರಿಗೆ ಮತ್ತು ಸಂಚಾರಗಳ ದರಏರಿಕೆ	:	ರೂ.	205 "
ಮುಂಗಡ ಪತ್ರದಲ್ಲಿನ ಹೊಸ ತೆರಿಗೆ	:	ರೂ.	476 "
ಮುಂಗಡ ಪತ್ರದಲ್ಲಿನ ಕೊರತೆ (deficit)	:	ರೂ.	1417 "
		ಒಟ್ಟು ರೂ.	4698 "

5000 ಕೋಟಿ ಹೊಸಭಾರ:

ಹೊಸ ಕರಭಾರವನ್ನು ಕೇವಲ ಕೇಂದ್ರ ಮುಂಗಡಪತ್ರದ ಸೂಚನೆಗಳಿಂದ ಅಳೆಯಬಾರದು. ಪೆಟ್ರೋಲ್ ದರಏರಿಕೆ, ರೈಲ್ವೆ ಸಾರಿಗೆ ಮತ್ತು ಸಂಚಾರಗಳ ದರಏರಿಕೆ, ಮುಂಗಡ ಪತ್ರದಲ್ಲಿ ಸೂಚಿಸಿದ ಹೊಸ ತೆರಿಗೆ ಮತ್ತು ಕೊರತೆ ಇವುಗಳನ್ನೆಲ್ಲಾ ಸಮಗ್ರವಾಗಿ ಪರಿಶೀಲಿಸಿದರೆ, ಈ ತಿಂಗಳಿನಲ್ಲಿ ಇಷ್ಟರಲ್ಲಿಯೇ ಸುಮಾರು ರೂ. 5000 ಕೋಟಿಗಳಷ್ಟು ಜನರ ಮೇಲೆ ಹೊಸ ಭಾರ ಹೇರಿಸಲಾಗಿದೆ!

ಪೆಟ್ರೋಲ್ ದರಏರಿಕೆ:

ಪಾರ್ಲಿಮೆಂಟ್ ಅಧಿವೇಶನವು ತಾ. 9-6-80ರಂದು ಪ್ರಾರಂಭವಾಗಿದ್ದರೂ ಎರಡೇ ದಿನಗಳ ಹಿಂದೆ ಪೆಟ್ರೋಲ್ ಲೀಟರಿಗೆ 65ಪೈಸೆಯಂತೆ ಮತ್ತು ಡಿಸ್ಸೆಲ್ ಲೀಟರಿಗೆ 70 ಪೈಸೆಯಂತೆ ಬೆಲೆಏರಿಸಿ ಇಂದಿರಾ ಸರಕಾರವು ಒಂದೇ ನೆಗೆತಕ್ಕೆ ರೂ. 2500 ಕೋಟಿಯಷ್ಟು ಜನರ ಮೇಲೆ ಹೆಚ್ಚಿನ ಭಾರ ಹೇರಿತು! ಆಮದು ಮಾಡಿಕೊಳ್ಳುತ್ತಿರುವ ಕಚ್ಚಾತೈಲದ ಬೆಲೆಯು ಹೆಚ್ಚಾದಂತೆ ಪೆಟ್ರೋಲಿಯಂ ಪದಾರ್ಥಗಳ ಬೆಲೆಏರಿಸುವುದು ಅನಿವಾರ್ಯ ಎಂದೂ, ಸ್ವಲ್ಪ ಸಮಯದಲ್ಲಿಯೇ ಇವುಗಳ ಬೆಲೆ ಇನ್ನಷ್ಟು ಏರಿಸಬೇಕಾದೀತೆಂದೂ ಪೆಟ್ರೋಲಿಯಂ ಮಂತ್ರಿ ವೀರೇಂದ್ರ ಪಾಟೀಲರು ತಿಳಿಸಿದ್ದಾರೆ. ಇದೆಂತಹ ಹೊಣೆಗೇಡಿತನ? ಕಳೆದ ಆಗಸ್ಟ್‌ನಲ್ಲಿಯಷ್ಟೇ ಸೀಮೆಎಣ್ಣೆಯೂ ಸೇರಿದಂತೆ ಹೆಚ್ಚಿನ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ಏರಿಸಿ ರೂ. 800 ಕೋಟಿಗೂ ಹೆಚ್ಚು ಭಾರವನ್ನು ಜನರ ಮೇಲೆ ಹೇರಿಸಲಾಗಿತ್ತು. ಇತ್ತೀಚೆಗೆ ಕೆನಡಾ ಮತ್ತು ಜಪಾನ್ ದೇಶಗಳಲ್ಲಿ ಹೊಸ ಸರಕಾರಗಳು ತಮ್ಮ ಪಾರ್ಲಿಮೆಂಟಿನಲ್ಲಿ ಪೆಟ್ರೋಲ್ ದರಏರಿಸುವ ಪ್ರಸ್ತಾಪ ಮಾಡಿದೊಡನೆಯೇ ಅವಿಶ್ವಾಸ ಗೊತ್ತುವಳಿಗಳಿಂದ ಉರುಳಿಸಲ್ಪಟ್ಟು ಮರುಚುನಾವಣೆ ನಡೆಯಲಿರುವುದು! ಆದರೆ, ಪ್ರಜಾಪ್ರಭುತ್ವ ಮತ್ತು ಬಡತನ ನಿವಾರಣೆಯ ಘೋಷಣೆಗಳಿಂದ 2/3ರಷ್ಟು ಬಹುಮತಗಳಿಸಿ ಅಧಿಕಾರಕ್ಕೆ ಬಂದ ಇಂದಿರಾ ಸರಕಾರ ನಿರ್ದಯವಾಗಿ ನಿರ್ಭೀತಿಯಿಂದ ಪಾರ್ಲಿಮೆಂಟ್ ಅಧಿವೇಶನದ ಮುಂಚಿತವಾಗಿಯೇ ಪೆಟ್ರೋಲಿಯಂ ಪದಾರ್ಥಗಳ ಬೆಲೆಏರಿಸಿತು. ಎಂತಹ ವಿಪರ್ಯಾಸ!

ಆಮದು ಮಾಡಿಕೊಳ್ಳುವ ಕಚ್ಚಾತೈಲದ ಬೆಲೆ ಏರಿದರೆ, ಅವುಗಳ ಬಳಕೆಯಲ್ಲಿ ಮಿತವ್ಯಯ ಮಾಡಬೇಕಿತ್ತು. ವಿದ್ಯುತ್, ಕಲ್ಲಿದ್ದಲು ಮುಂತಾದ ಇತರ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಪಡೆಯಲು ಪ್ರಯತ್ನಿಸಬೇಕಿತ್ತು. ಪೆಟ್ರೋಲಿಯಂ ಪದಾರ್ಥಗಳ ಮೇಲಿರುವ ರೂ. 1500 ಕೋಟಿಗೂ ಮಿಕ್ಕಿದ ಅಬಕಾರಿ ತೆರಿಗೆಯಲ್ಲಿ ಕಡಿತಗೊಳಿಸಬೇಕಿತ್ತು. ಆದರೆ ಜನಪ್ರಿಯ (?) ಇಂದಿರಾ ಸರಕಾರ ಮಾಡುತ್ತಿರುವುದೇನು? ಪೆಟ್ರೋಲಿಯಂ ಪದಾರ್ಥಗಳ ಬೆಲೆಏರಿಸುವುದು ಮತ್ತು ಅವುಗಳ ಮೇಲೆ ವಿಪರೀತ ಅಪ್ರತ್ಯಕ್ಷ ತೆರಿಗೆ ವಿಧಿಸುವುದು. ಒಂದು ಕಿಲೋ ಲೀಟರ್ ಪೆಟ್ರೋಲಿನ ಉತ್ಪಾದನೆಯ ಬೆಲೆಯು ರೂ. 1518 ಆಗಿದ್ದರೆ, ಅದರ ಮೇಲೆ ವಿಧಿಸುವ ಅಬಕಾರಿ ತೆರಿಗೆಯು ರೂ. 2216 ರಷ್ಟಾಗಿದೆ ರೂ. 728ರಷ್ಟು ಇತರ ತೆರಿಗೆ ಸುಂಕಗಳನ್ನು ಹೇರಲಾಗಿದೆ. ಈಗ ಪುನಃ ರೂ. 650ರಷ್ಟು ಬೆಲೆ ಏರಿಸಲಾಗಿದ್ದು, ಮಾರುವ ಬೆಲೆಯು ಅಂತಿಮವಾಗಿ ರೂ. 5111ಕ್ಕೇರಿದೆ! ಪೆಟ್ರೋಲಿಯಂನಂತಹ ಜೀವನಾವಶ್ಯಕ ವಸ್ತುವಿನ ಮೇಲೆ ಇಷ್ಟೊಂದು ಅಪ್ರತ್ಯಕ್ಷ ತೆರಿಗೆ ಹೇರುವುದರಿಂದ ಇತರ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯ ಮತ್ತು ಸಾರಿಗೆಯ ವೆಚ್ಚವೂ ಜನಸಾಮಾನ್ಯರ ಸಂಚಾರ ವೆಚ್ಚಗಳೂ ಏರುವುವು. ಸರಕಾರದ ವಕ್ತಾರರು ಈ ಸತ್ಯಾಂಶವನ್ನು ಜನರಿಂದ ಮುಚ್ಚಿಡುತ್ತಿದ್ದಾರೆ. ಇದು ಬಡಜನರ ದಿನಬಳಕೆಯ ಸೀಮೆಎಣ್ಣೆಗೂ ಅನ್ವಯಿಸುವುದು. ಬೆಲೆ ಏರಿಕೆಯ ಕ್ರಮಕೈಕೊಂಡು ಬೆಲೆ ಇಳಿಸುವುದೇ ನಮ್ಮ ಗುರಿ ಎಂದು ಇಂದಿರಾ ಸರಕಾರ ಹೇಳಿಕೊಳ್ಳುತ್ತಿರುವುದು ಹಾಸ್ಯಾಸ್ಪದ!

ರೈಲ್ವೆ ದರ ಹೆಚ್ಚಳ:

ಕಳೆದ ವರ್ಷ ರೈಲ್ವೆಸಾರಿಗೆ ಮತ್ತು ಸಂಚಾರಗಳ ದರ ಹೆಚ್ಚಳದಿಂದ ರೂ 178 ಕೋಟಿಗಳಷ್ಟು ಭಾರವನ್ನು ಜನರ ಮೇಲೆ ಹೊರಿಸಲಾಗಿತ್ತು. ಈ ವರ್ಷ ಪುನಃ ರೂ. 205 ಕೋಟಿಗಳಷ್ಟು ರೈಲ್ವೆ ಸಾರಿಗೆ ಮತ್ತು ಸಂಚಾರಗಳ ದರ ಏರಿಸಲಾಗಿದೆ. ದ್ವಿತೀಯ ವರ್ಗದ ಮೈಲ್ ಮತ್ತು ಎಕ್ಸ್‌ಪ್ರೆಸ್ ರೈಲ್ವೆ ಪ್ರಯಾಣದ ದರವನ್ನು ಶೇ 12.5ರಷ್ಟು ಹೆಚ್ಚಿಸಲಾಗಿದೆ, ದ್ವಿತೀಯ ವರ್ಗದ ಇತರ ರೈಲ್ವೆ ಪ್ರಯಾಣದ ದರವನ್ನು ಶೇ. 10ರಷ್ಟು ಹೆಚ್ಚಿಸಲಾಗಿದೆ. ತ್ರೈಮಾಸಿಕ ಟಿಕೇಟುಗಳ ದರವನ್ನು ಶೇ. 15ರಷ್ಟು ಹೆಚ್ಚಿಸಲಾಗಿದೆ. ಪರಿಣಾಮವಾಗಿ ಜನಸಾಮಾನ್ಯರ ಮುಖ್ಯವಾಗಿ ಕೆಲಸಗಾರರ ಹಾಗೂ ನೌಕರರ ಪ್ರಯಾಣ ವೆಚ್ಚವು ಹೆಚ್ಚಿದೆ, ರೈಲ್ವೆ ಟಿಕೆಟು ತೆಗೆದುಕೊಂಡರೂ ಪ್ರಯಾಣ ಮಾಡಲು ಸಾಕಷ್ಟು ಜಾಗವೇ ಸಿಗದಿರುವ ದುರವಸ್ಥೆಯನ್ನು ಹೋಗಲಾಡಿಸಿ ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸುವ ಬದಲು ಪ್ರಯಾಣದ ದರವನ್ನೇ ಪ್ರತಿವರ್ಷವೂ ಹೆಚ್ಚಿಸಲಾಗುತ್ತಿದೆ ರೈಲ್ವೆ ಸರಕುಸಾಗಾಟದ ಈಗಿನ ದರದ ಮೇಲೆ ಶೇ. 15ರಷ್ಟು ಸರ್‌ಚಾರ್ಜ್ ವಿಧಿಸುವ ಮೂಲಕ ಕೈಗಾರಿಕಾ ಸಾಮಗ್ರಿಗಳ ಬೆಲೆ ಏರುವ ಸಂಭವವಿದೆ. ಕೆಲವೊಂದು ಜೀವನಾವಶ್ಯಕ ವಸ್ತುಗಳ ಸಾಗಾಟಕ್ಕೆ ಹೊಸ ಸರ್‌ಚಾರ್ಜ್ ಅನ್ವಯಿಸುವುದಿಲ್ಲವಾದರೂ ಸಾಮಾನ್ಯ ಬೆಲೆಮಟ್ಟವು ಏರುವುದರಲ್ಲಿ ಸಂಶಯವಿಲ್ಲ.

ಪಾರ್ಲಿಮೆಂಟಿನಲ್ಲಿ ಕಾಂ. ಸಮರ್ ಮುಖರ್ಜಿಯವರು ತಿಳಿಸಿದಂತೆ, ರೈಲ್ವೆ ಸಾರಿಗೆಯು ಬ್ರಿಟಿಷರ ಕಾಲದಲ್ಲಿದ್ದಂತೆಯೇ ಇನ್ನೂ ಬಂಡವಾಳಶಾಹಿ ಚೌಕಟ್ಟಿನಲ್ಲಿ ಲಾಭಗಳಿಸುವ ಉದ್ದೇಶದಿಂದ ನಡೆಯುತ್ತಿದೆ. ರೈಲ್ವೆಯನ್ನು ಒಂದು ಸಾರ್ವಜನಿಕ ಉಪಯುಕ್ತ ಸಂಸ್ಥೆ (public utility) ಎಂದು ಪರಿಗಣಿಸಲಾಗುತ್ತಿಲ್ಲ ರೈಲ್ವೆ ವರಮಾನವು 1979-80ರಲ್ಲಿ ರೂ. 2354 ಕೋಟಿಯಾಗಿದ್ದು, 1980-81ರಲ್ಲಿ ರೂ. 2750 ಕೋಟಿಗೇರುವ ನಿರೀಕ್ಷೆ ಇದೆ. ಅದರ ಲಾಭವೂ ರೂ. 254 ಕೋಟಿಯಿಂದ ರೂ. 365 ಕೋಟಿಗೇರುವ ನಿರೀಕ್ಷೆ ಇದೆ. ಅಂದರೆ, ರೈಲ್ವೆ ಆದಾಯದ ಶೇ. 11ರಿಂದ ಶೇ. 14ರಷ್ಟು ಸರಕಾರದ ಲಾಭಾಂಶವೇ ಆಗಿರುವುದನ್ನು ಗಮನಿಸಬೇಕು. ರೈಲ್ವೆಯ ಲಾಭದಲ್ಲಿ ಕೇಂದ್ರಸರ್ಕಾರದ ಪಾಲು ರೂ. 296 ಕೋಟಿಯಿಂದ ರೂ, 322 ಕೋಟಿಗೇರುವುದೇ ಅಲ್ಲದೆ, 1980-81ರ ಅಂತ್ಯದಲ್ಲಿ ರೂ. 43 ಕೋಟಿ ಮಿಗುವುದು. ರೈಲ್ವೆ ಆಡಳಿತದಲ್ಲಿ ಅಧಿಕಾರಶಾಹಿ, ಅರಾಜಕತೆ, ಭ್ರಷ್ಟಾಚಾರ, ಸಾಮಗ್ರಿಗಳ ದುರುಪಯೋಗ, ಇತ್ಯಾದಿಗಳಿರುವುದರಿಂದ ಸಾರಿಗೆ ಸಂಚಾರದಲ್ಲಿ ಸಾಕಷ್ಟು ಸೌಲಭ್ಯಗಳಾಗಲೀ ಆದಾಯವಾಗಲೀ ಸಿಗುತ್ತಿಲ್ಲ. ಕಾರ್ಮಿಕರ ವೇತನ ಮತ್ತು ಜೀವನಮಟ್ಟವು ಹದಗೆಡುತ್ತಿದೆ. ರೈಲ್ವೆ ಕಾರ್ಮಿಕರ ಸಂಖ್ಯೆಯು ಕಡಿಮೆಯಾಗುತ್ತಿದ್ದು ಕೆಲಸದ ಭಾರವು ಹೆಚ್ಚುತ್ತಿದೆ. ಅವರಿಗೆ ರೈಲ್ವೆ ಆಡಳಿತದಲ್ಲಿ ಯಾವ ಅವಕಾಶವೂ ಇಲ್ಲ. ರೈಲ್ವೆ ಮುಂಗಡ ಪತ್ರದಲ್ಲಿ ರೈಲ್ವೆ ಆಡಳಿತ ಮತ್ತು ರೈಲ್ವೆ ಕಾರ್ಮಿಕರ ಹಾಗೂ ಪ್ರಯಾಣಿಕರ ಹಿತಾಸಕ್ತಿಗಳನ್ನು ಉತ್ತಮಗೊಳಿಸುವ ಯಾವ ಸೂಚನೆಯೂ ಕಂಡುಬರುವುದಿಲ್ಲ.

ಹೊಸ ಕರಭಾರ ಮತ್ತು ಕೊರತೆ:

1979-80ರ ಮುಂಗಡಪತ್ರದಲ್ಲಿ ಹೊಸ ಕರಭಾರವು ರೂ. 680 ಕೋಟಿಯಷ್ಟಾಗಿತ್ತು. ಕೊರತೆಯು ರೂ. 1335 ಕೋಟಿಯಷ್ಟಾಗಿತ್ತು. ಪರಿಣಾಮವಾಗಿ ಬೆಲೆಏರಿಕೆಯು ಶೇ. 1ಕ್ಕಿಂತ ಹೆಚ್ಚಾಗಲಾರದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ವರ್ಷಾಂತ್ಯದಲ್ಲಿ ಬೆಲೆಏರಿಕೆಯು ಶೇ. 20ರ ದರಕ್ಕೂ ಮೀರಿತು, ಕೊರತೆ ಹಣ ಸೃಷ್ಟಿಯು ರೂ. 2700 ಕೋಟಿಗೇರಿತು. ಮುಂದೆ ಹಣದುಬ್ಬರವು ಈ ವರ್ಷಾಂತ್ಯದಲ್ಲಿ ಶೇ. 40ಕ್ಕೆ ನೆಗೆಯುವ ಭಯವಿದ್ದಾಗಲೇ, 1980-81ರ ಹೊಸ ಕರಭಾರ ಮತ್ತು ಕೊರತೆಯನ್ನು ಸೂಚಿಸಲಾಗಿದೆ. ಈಗಿನ ಮುಂಗಡಪತ್ರದಲ್ಲಿ ರೂ. 476 ಕೋಟಿಯ ಹೊಸ ತೆರಿಗೆಯ ಸೂಚನೆಗಳಿವೆ ಮತ್ತು ರೂ. 1417 ಕೋಟಿಯಷ್ಟು ಕೊರತೆ ತೋರಿಸಲಾಗಿದೆ. ಅರ್ಥಶಾಸ್ತ್ರಜ್ಞರು ಈಗಾಗಲೇ ಹೇಳುತ್ತಿರುವಂತೆ, ಕೊರತೆಯ ಪ್ರಮಾಣವು ರೂ. 3000 ಕೋಟಿಗೇರಿತು!

ಹೊಸ ಕರಭಾರದ ಮತ್ತು ಕೊರತೆಯ ಹಿರಿಮದ್ದನ್ನು ಮರೆಯಾಗಿಸಿಟ್ಟುಕೊಂಡು, ಪ್ರೆಶರ್ ಕುಕ್ಕರ್, ಹೊಲಿಗೆ ಯಂತ್ರ, ಟೂತ್‌ಪೇಸ್ಟ್, ಸೈಕಲ್, ಮುಂತಾದ ಕೆಲವು ಜೀವನಾವಶ್ಯಕ ವಸ್ತುಗಳ ಮೇಲಿನ ಅಬಕಾರಿ ತೆರಿಗೆಯನ್ನು ಕಡಿಮೆಮಾಡಿ ಮಧ್ಯಮ ವರ್ಗದ ಜನರಿಗೆ ರೂ. 35 ಕೋಟಿಗಳಷ್ಟು ಅಲ್ಪ ಪರಿಹಾರ ನೀಡಲಾಗಿದೆ. ಹಾಗೆಯೇ 8 ಕೋಟಿಯಷ್ಟು ಕಸ್ಟಮ್ಸ್ ಡ್ಯೂಟಿಯಲ್ಲಿ ರಿಯಾಯತಿ ನೀಡಲಾಗಿದೆ. ಆದರೆ, ಅದರ ಬದಲು ರೂ. 188 ಕೋಟಿಯಷ್ಟು ಹೊಸ ಅಬಕಾರಿ ತೆರಿಗೆ ಮತ್ತು ರೂ. 32 ಕೋಟಿಯಷ್ಟು ಹೊಸ ಕಸ್ಟಮ್ಸ್ ಡ್ಯೂಟಿ ಹೇರಿಸಲಾಗಿದೆ! ಅಂದರೆ, ಚರಣಸಿಂಗರು ವಿಧಿಸಿದ ಅಪ್ರತ್ಯಕ್ಷ ತೆರಿಗೆಗಳಲ್ಲಿ ರೂ. 43 ಕೋಟಿ ರಿಯಾಯತಿ ನೀಡಿ ರೂ. 210 ಕೋಟಿಯಷ್ಟು ಹೊಸ ತೆರಿಗೆಗಳನ್ನು ಹೇರಿಸಲಾಗಿದೆ! ಇದರಿಂದಾಗಿ ಸಿಗರೇಟು, ಟ್ಯೂಬ್ ಟಾಯರ್, ಉಕ್ಕು ಮತ್ತು ಕಬ್ಬಿಣ, ಹತ್ತಿ ಮತ್ತು ಕೃತಕ ನೂಲು ಮುಂತಾದವುಗಳ ಬೆಲೆಗಳು ಇನ್ನಷ್ಟು ಹೆಚ್ಚುವವು. ಅದರ ದುಷ್ಪರಿಣಾಮವು ಇಡೀ ಆರ್ಥಿಕ ವ್ಯವಸ್ಥೆಯನ್ನೇ ಆವರಿಸುವುದು. ಹೊಸ ತೆರಿಗೆಗಳಿಂದ ಬೆಲೆಮಟ್ಟದಲ್ಲಿ ಆಗುವ ಪರಿಣಾಮವನ್ನು ತಿಳಿಸಲು ಹಣಕಾಸು ಇಲಾಖೆಯ ವರಿಷ್ಟ ಅಧಿಕಾರಿಗಳೇ ನಿರಾಕರಿಸುತ್ತಿದ್ದಾರೆ. ಕಾರಣ, ಕಳೆದ ವರ್ಷ ಅವರ ಹೇಳಿಕೆ ತಪ್ಪಾಗಿದೆ!

ಪ್ರತ್ಯಕ್ಷ ತೆರಿಗೆಯಲ್ಲಿಯೂ ಮಧ್ಯಮ ವರ್ಗದವರಿಗೆ ಸ್ವಲ್ಪ ರಿಯಾಯತಿ ತೋರಿಸಿದರೂ, ರಿಯಾಯತಿಯ ಸಿಂಹಪಾಲು ಶ್ರೀಮಂತ ವರ್ಗಕ್ಕೇ ಹೋಗಿದೆ. ಆದಾಯ ತೆರಿಗೆಯಲ್ಲಿ ರೂ. 11,000ದಿಂದ ರೂ. 40,000 ವಾರ್ಷಿಕ ಆದಾಯ ಇರುವವರಿಗೆ ರೂ. 360ರಿಂದ ರೂ. 810ರಷ್ಟು ತೆರಿಗೆ ರಿಯಾಯತಿ ಸಿಕ್ಕಿದರೆ, ರೂ. 50,000ದಿಂದ ರೂ. 1,00,000 ವಾರ್ಷಿಕ ಆದಾಯ ಇರುವವರಿಗೆ ರೂ. 1270ರಿಂದ ರೂ. 3920ರಷ್ಟು ತೆರಿಗೆ ರಿಯಾಯತಿ ಸಿಕ್ಕಿದೆ. ಆದರೆ, ರೂ. 1,50,000ದಿಂದ ರೂ. 10,00,000 ಆದಾಯ ಇರುವವರಿಗೆ ರೂ. 6920ರಿಂದ ರೂ. 57,920 ದಷ್ಟು ತೆರಿಗೆ ರಿಯಾಯತಿ

(6ನೇ ಪುಟ ನೋಡಿ)

ಆಧುನಿಕ ರಾಜಕೀಯದ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

(ಹಿಂದಿನ ಸಂಚಿಕೆಯಿಂದ)

ವರ್ಗಗಳ ಉಗಮ ಮತ್ತು ಅದರ ಪ್ರಭಾವ:

ಈ ಯುಗ ನಿರ್ಮಾಪಕ ಪರಿವರ್ತನೆಯ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳೆಂದರೆ ಮಾಲೀಕ ಮತ್ತು ನೌಕರ ಎಂಬ ಎರಡು ಹೊಸ ವರ್ಗ ಅಥವಾ ಬೂರ್ಜ್ವಾ ಮತ್ತು ಕಾರ್ಮಿಕ ಎಂಬ ವರ್ಗಗಳ ಉಗಮ. 19ನೇ ಶತಮಾನದ ಅಂತ್ಯಕಾಲ ಮತ್ತು 20ನೇ ಶತಮಾನದ ಪ್ರಾರಂಭ ಕಾಲದಲ್ಲಿ ಈ ಎರಡೂ ವರ್ಗಗಳು ಉಗಮವಾದವು. ಮತ್ತು ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅವು ದೃಢಗೊಂಡವು. ರಾಮಮೋಹನ್ ಮತ್ತು ಸಂಗಡಿಗರು ಬಂಗಾಳದಲ್ಲಿ, ಮಹಾರಾಷ್ಟ್ರದಲ್ಲಿ ಜ್ಯೋತಿಬಾಫುಲೆ ಆರಂಭಿಸಿದ ಸಾಮಾಜಿಕ ಮತ್ತು ಶಿಕ್ಷಣದ ಪರಿಷ್ಕರಣ ಚಳುವಳಿ ಮತ್ತು 1860ರಲ್ಲಿ ಆಧುನಿಕ ಕಾರ್ಖಾನೆಗಳ ಸ್ಥಾಪನೆಯಿಂದ ಹೊಸ ಆರ್ಥಿಕ ಸಂಸ್ಥೆಗಳು, ರಾನಡೆ ನವರೋಜಿ ದತ್ ಮುಂತಾದವರಿಂದ ಆರಂಭವಾದ ಬೂರ್ಜ್ವಾ ರಾಜಕೀಯ ವಿಜ್ಞಾನದ ವಿಕಾಸ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ರಚನೆಗೆ ದಾರಿಮಾಡಿದ ಸಾಮಾಜಿಕ ರಾಜಕೀಯ ಸಂಸ್ಥೆಗಳ ಸ್ಥಾಪನೆ–ಈ ಹಂತಗಳ ಮೂಲಕ ಭಾರತದ ಬೂರ್ಜ್ವಾ ವರ್ಗವು ಒಂದು ವಿಶಿಷ್ಟ ವರ್ಗವಾಗಿ ರೂಪಿತಗೊಂಡಿತು. ಬೆಳೆಯುತ್ತಿರುವ ಬೂರ್ಜ್ವಾ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಮೂಲಭೂತವಾಗಿ ಪ್ರತಿನಿಧಿಸುವ ಅಂಶದಲ್ಲಿ ಇದೂ ವಿದೇಶಿ ದೊರೆಗಳನ್ನೇ ಹೋಲುತ್ತಿತ್ತು. ಆದರೆ ಇಂಡಿಯಾದ ಬೂರ್ಜ್ವಾ ವರ್ಗ ದೇಶವನ್ನು ಆಳುತ್ತಿದ್ದ ದೊರೆಗಳೊಂದಿಗೆ ಘರ್ಷಣೆಗೆ ತೊಡಗಿತು. ಏಕೆಂದರೆ ಅವರು ವಿದೇಶೀಯರಾಗಿದ್ದರು, ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಪೂರ್ಣಫಲದ ಏಕಸ್ವಾಮ್ಯವನ್ನು ಪಡೆಯಲು ಇಬ್ಬರ ನಡುವೆ ಘರ್ಷಣೆ ಆರಂಭವಾಯಿತು. ಇಂಡಿಯಾದ ಬೂರ್ಜ್ವಾ ವರ್ಗ ಹಳೆಯ ಸಾಮಾಜಿಕ ವಿಧಾನದ ವಿರುದ್ಧವೂ ಘರ್ಷಣೆ ನಡೆಸಿತು. ಈ ಅಂಶದಲ್ಲೂ ಅವರು ವಿದೇಶೀ ದೊರೆಗಳಿಗೆ ಹತ್ತಿರವಾಗಿದ್ದರು. ರಾಮಮೋಹನ್ ಮುಂತಾದವರು 1857ರ ಜನಪ್ರಿಯ ದಂಗೆಯನ್ನು ವಿರೋಧಿಸಿದರು ಎಂಬ ಅಂಶದಿಂದ ಇದು ಸ್ಪಷ್ಟವಾಗುತ್ತದೆ.

ಈ ಹೊಸ ವರ್ಗದ ಜೊತೆ ಜೊತೆಯಲ್ಲಿ ಹೊಸ ಕಾರ್ಮಿಕ ವರ್ಗವೊಂದು ಹುಟ್ಟಿಕೊಂಡಿತು. ಆದರೆ ಒಂದು ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯಾಗಿ ಸಂಘಟನೆಗೊಳ್ಳಲು ಇದು ಬೂರ್ಜ್ವಾ ವರ್ಗಕ್ಕಿಂತ ಹೆಚ್ಚು ಕಾಲ ತೆಗೆದುಕೊಂಡಿತು. ಅದರಲ್ಲಿ ಯೂ ರಾಜಕೀಯ ಶಕ್ತಿಯಾಗಿ ಬಲಗೊಳ್ಳಲು ಇನ್ನೂ ಹೆಚ್ಚು ಕಾಲ ತೆಗೆದುಕೊಂಡಿತು. ಒಂದು ಅರ್ಥದಲ್ಲಿ ರಾಜಕೀಯವಾಗಿ ಅದು 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಹುಟ್ಟಿಕೊಂಡಾಗಲೇ ವ್ಯವಸ್ಥಿತಗೊಂಡಿತು. ಆದರೆ ಕಾರ್ಮಿಕ ವರ್ಗವು ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯಾಗಿ ಸಂಘಟನೆಗೊಳ್ಳುವುದು 1920ರಲ್ಲಿ ಮಾತ್ರ ಸಾಧ್ಯವಾಯಿತು. (ಇಂಡಿಯಾದ ಪ್ರಾಥಮಿಕ ಕಾರ್ಮಿಕ ಸಂಸ್ಥೆಯಾದ ಎ. ಐ. ಟಿ. ಯು.ಸಿ. ಅಸ್ತಿತ್ವಕ್ಕೆ ಬಂದದ್ದು 1920ರಲ್ಲೇ) ಕಾರ್ಮಿಕ ವರ್ಗದ ರಾಜಕೀಯ ಸಂಸ್ಥೆಗಳಾದ ಸೋಷಲಿಸ್ಟ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಅಸ್ತಿತ್ವಕ್ಕೆ ಬರಲು ಇನ್ನೂ ದೀರ್ಘಕಾಲ ಬೇಕಾಯಿತು. ಕಮ್ಯುನಿಸ್ಟ್ ಮತ್ತು ಸೋಷಲಿಸ್ಟ್ ಚಳುವಳಿ ಸಾಕಷ್ಟು ಸ್ವತಂತ್ರವಾಗಿ ಕಾರ್ಯಾಚರಣೆ ಮಾಡಿದ್ದು 1930ರಲ್ಲೇ. ಆಗಲೂ ಕೂಡ ಅದು ಭಾರತದ ಬೂರ್ಜ್ವಾ ವರ್ಗದ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿನ ಕೈಕೆಳಗಿನ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿದೊಳಗಿನ ಒಂದು ಗುಂಪಾಗಿ ಕೆಲಸ ಮಾಡಬೇಕಾಗಿತ್ತು.

ಬ್ರಿಟಿಷರು ತಮ್ಮ ರಾಜಕೀಯ ಮತ್ತು ಆಡಳಿತ ಅಧಿಕಾರವನ್ನು ಭಾರತದ ಪ್ರತಿನಿಧಿಗಳಿಗೆ ಬಿಟ್ಟುಕೊಡುವ ವೇಳೆಗೆ, ಬೂರ್ಜ್ವಾ ವರ್ಗವು ಅದನ್ನು ಪಡೆಯುವಷ್ಟು ಬಲವಾಗಿ ವ್ಯವಸ್ಥಿತಗೊಂಡಿತ್ತು ಎಂಬ ಅಂಶದಲ್ಲಿ ಇದರ ಪರಿಣಾಮವನ್ನು ಗುರುತಿಸಬಹುದು. ಬ್ರಿಟಿಷರು ಭಾರತವನ್ನು ಒಡೆದು ಅಧಿಕಾರವನ್ನು ವರ್ಗಾಯಿಸಿದಾಗ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಇಂಡಿಯನ್ ಯೂನಿಯನ್ ಮುಸ್ಲೀಂಲೀಗ್ ಈ ಎರಡು ಪ್ರತಿನಿಧಿಗಳ ಮೂಲಕ ಅಧಿಕಾರವು ಬೂರ್ಜ್ವಾ ವರ್ಗದ ಕೈಗೆ ಬಂದಿತು. ಇದು ಹೇಗಾದರೂ, ಬ್ರಿಟಿಷರಿಂದ ಈ ಬೂರ್ಜ್ವಾ ವರ್ಗ ಅಧಿಕಾರ ತೆಗೆದುಕೊಂಡ 5 ವರ್ಷಗಳಲ್ಲೇ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾದ ಕಮ್ಯುನಿಸ್ಟ್ ಪಕ್ಷವು ಸಂಸತ್ತಿನಲ್ಲಿ ಮತ್ತು ನಾಲ್ಕು ರಾಜ್ಯಗಳಲ್ಲಿ ಮುಖ್ಯವಾದ ವಿರೋಧ ಪಕ್ಷದ ಸ್ಥಾನವನ್ನು ಗಳಿಸಿತೆಂಬುದನ್ನು ನೆನಪಿಡಬೇಕು.

ಇತ್ತೀಚಿನ ರಾಜಕೀಯ ಇತಿಹಾಸದ ಈ ಕೆಲವು ಅಂಶಗಳನ್ನು ಇಲ್ಲಿ ಹೇಳಿದ ಕಾರಣವೆಂದರೆ ಸ್ವಾತಂತ್ರ್ಯ ಚಳುವಳಿಯ ದಶಕಗಳು ಮತ್ತು ಸ್ವಾತಂತ್ರ್ಯೋತ್ತರ ಬೆಳವಣಿಗೆಗಳನ್ನು ಕಂಡ ಭಾರತೀಯ ಇತಿಹಾಸದ ಬ್ರಿಟಿಷ್ ಯುಗದಲ್ಲಿ ವರ್ಗಗಳು ಮತ್ತು ರಾಜಕೀಯ ಪಕ್ಷಗಳು ಸಾಮಾಜಿಕ ಜೀವನದಲ್ಲಿ ದಿನೇ ದಿನೇ ಮುಖ್ಯ ಸ್ಥಾನವನ್ನು ಪಡೆದುಕೊಳ್ಳುತ್ತಿದ್ದವು. ಭಾರತದ ಚರಿತ್ರೆಯಲ್ಲಿ ಪ್ರಾಚೀನ ಮತ್ತು ಮಧ್ಯಯುಗದ ಹಲವು ಶತಮಾನಗಳಲ್ಲಿ ವರ್ಗಗಳು ಮತ್ತು ರಾಜಕೀಯ ಪಕ್ಷಗಳು ಇರಲಿಲ್ಲ. ಆದರೆ ಜಾತಿಗಳು, ಧಾರ್ಮಿಕ ಸಮೂಹಗಳು, ಹಳ್ಳಿಗಳು, ಮತ್ತು ಕುಟುಂಬಗಳು ಇದ್ದವು. ಸಾಮಾಜಿಕ ವ್ಯವಸ್ಥೆಯು ಇವುಗಳಿಂದ ಪ್ರಾರಂಭವಾಗಿ ಇಲ್ಲಿಯೇ ಮುಕ್ತಾಯವಾಗುತ್ತಿತ್ತು. ಇದರ ಮೂಲಗಳು ಪ್ರಾಚೀನ ಗಣಸಮಾಜದ ಆಧಾರದ ಮೇಲೆ ಚಾತುರ್ವರ್ಣ್ಯ ವ್ಯವಸ್ಥೆ ಸೃಷ್ಟಿಯಾದ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಸಮಾಜದ ಸಂಸ್ಥೆಗಳು ಆಧುನಿಕ ಕಾಲದಲ್ಲಿಯೂ ಉಳಿದು, ಜಾತಿ ಮತ್ತು ಧಾರ್ಮಿಕ ಸಮೂಹಗಳ ತೊಡಕುಗಳನ್ನು ಮೀರುವ ಮೂಲಕ ವರ್ಗಗಳು ಮತ್ತು ರಾಜಕೀಯ ಪಕ್ಷಗಳ ಮೇಲೂ ಪ್ರಭಾವವನ್ನು ಬೀರುತ್ತದೆ. ಆದರೆ ರಾಜಕೀಯ ಪ್ರಜಾಪ್ರಭುತ್ವ ಮುಂದುವರೆದಂತೆ, ಸಾಮಾಜಿಕ ಮತ್ತು ವರ್ಗಸಂಘರ್ಷಗಳು ತೀವ್ರವಾದಂತೆಲ್ಲಾ ವಿವಿಧ ವರ್ಗಗಳು ಮತ್ತು ಹಂತಗಳ ಸಾಮೂಹಿಕ ಸಂಘಟನೆಗಳು ಮತ್ತು ರಾಜಕೀಯ

ಇ. ಎಂ. ಎಸ್. ನಂಬೂದಿರಿಪಾದ್

ಪಕ್ಷಗಳು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತವೆ. ರಾಜಕೀಯ ಪಕ್ಷಗಳು ಮತ್ತು ವರ್ಗಗಳ ಬೆಳವಣಿಗೆಯಲ್ಲಿ ಜಾತಿಗಳು ವಹಿಸಿದ ಪಾತ್ರದ ಬಗ್ಗೆ ಮತ್ತು ಇವುಗಳು ಜಾತಿಯನ್ನು ಹಿಂದೆ ಸರಿಸಿದ್ದರ ಬಗ್ಗೆ ಸರಿಯಾದ ಮತ್ತು ತುಲನಾತ್ಮಕವಾದ ಅಧ್ಯಯನ ಮಾಡಿದಾಗ ನಾವು ಸರಿಯಾದ ತೀರ್ಮಾನಗಳಿಗೆ ಬರಬಹುದು. ಈ ದೃಷ್ಟಿಕೋನದಿಂದಲೇ ಕೇರಳದ ರಾಜಕೀಯ ಪಕ್ಷಗಳು, ವರ್ಗಗಳು, ಜಾತಿ ಸಂಬಂಧಗಳು ಈಗ ಸದ್ಯದ ಸ್ಥಿತಿಯಲ್ಲಿ ಯಾವ ಬೆಳವಣಿಗೆಯನ್ನು ಪಡೆಯುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸುತ್ತೇನೆ.

ಭಾರತದ ಇತರ ರಾಜ್ಯಗಳಿಗೆ ಹೋಲಿಸಿದಂತೆ ಕೇರಳ:

ಈಗಾಗಲೇ ಹಿಂದೆ ಗಮನಿಸಿದಂತೆ, ಕೇರಳ ಅಸಂಖ್ಯಾತ ಜಾತಿ ಮತ್ತು ಉಪಜಾತಿಗಳು ವ್ಯಾಪಾರ ಉದ್ದಿಮೆಗೆ ಸಂಬಂಧಿಸಿದಂತೆ ನಿರ್ಧರಿಸಲ್ಪಟ್ಟ ಜಾತಿಯನ್ನು ಒಳಗೊಳ್ಳುವುದಿಲ್ಲ. ಸಾಮಾಜಿಕ ಚರಿತ್ರೆಯನ್ನು ವ್ಯಾಖ್ಯಾನಿಸುವಾಗ ಇದು ಅತಿ ವಿವರಣೆಯ ಅಂಶ ಎನ್ನಿಸಬಹುದು. ಆದರೆ ಇದನ್ನು ಹೀಗೆ ತೆಗೆದುಹಾಕುವುದು ತಪ್ಪಾಗುತ್ತದೆ. ಭಾರತದ ಇತರ ರಾಜ್ಯಗಳಲ್ಲಿ ಇರುವ ಹಾಗೆ ಕೇರಳದ ಜಾತಿ ವ್ಯವಸ್ಥೆಯಲ್ಲಿ ಒಂದು ವ್ಯಾಪಾರಿ ಜಾತಿ ಇಲ್ಲದಿರುವುದು ಮಾರುಕಟ್ಟೆ ಉತ್ಪಾದನೆ ಮತ್ತು ಮಾರುಕಟ್ಟೆಯಿಂದ ತಂದ ಸರಕುಗಳ ಬಳಕೆ ಇವೆರಡೂ ಸಾಮಾಜಿಕ ವಿಕಸನವು ಜಾತಿ ಹಂತವನ್ನು ಪಡೆದ ಚಾರಿತ್ರಿಕ ಯುಗದ ಜನತೆಯ ಜೀವನದಲ್ಲಿ ಅಪ್ರಮುಖವಾಗಿತ್ತೆಂಬುದನ್ನು ಸೂಚಿಸುತ್ತದೆ.

ಪ್ರಾಚೀನ ಯುಗದಲ್ಲಿ ಕೇರಳದಲ್ಲಿ ವ್ಯಾಪಾರವೇ ಅಸ್ತಿತ್ವದಲ್ಲಿರಲಿಲ್ಲ ಎಂದಲ್ಲ. ಸಾಹಿತ್ಯ, ಪ್ರಾಚ್ಯಶಾಸ್ತ್ರ, ಮತ್ತು ನಾಣ್ಯಶಾಸ್ತ್ರ ಇವುಗಳು ಕೊಡುವ ಆಧಾರದಿಂದ ಅದು ಅಸ್ತಿತ್ವದಲ್ಲಿತ್ತು ಎಂಬುದು ನಿರ್ವಿವಾದ. ಕೇರಳ ಮತ್ತು ಇತರ ಭಾರತೀಯ ರಾಜ್ಯಗಳ ನಡುವೆ ಮಾತ್ರವಲ್ಲದೆ, ಕೇರಳ ಮತ್ತು ಕೆಲವು ವಿದೇಶಗಳ ನಡುವೆಯೂ ಸ್ವಲ್ಪ ವ್ಯಾಪಾರ ಸಂಪರ್ಕವಿತ್ತು ಎಂಬುದನ್ನು ಅವು ತಿಳಿಸುತ್ತವೆ ಆದರೆ ಈ ವ್ಯಾಪಾರ ಸಂಪರ್ಕವೇನಿದ್ದರೂ ಸಮಾಜದ ಮೇಲ್ವರ್ಗ ಸಣ್ಣ ಗುಂಪಿಗೆ ಮಾತ್ರ ಸೀಮಿತವಾಗಿತ್ತು. ಇನ್ನು ಬಹುಪಾಲು ಜನ ಸ್ವಾವಲಂಬನದಲ್ಲಿ ಸಾಧಾರಣ ಜೀವನ ನಡೆಸುತ್ತಿದ್ದರು. ಉತ್ತರ ಭಾರತದಲ್ಲಿ ನಡೆದಂತೆ ಕೇರಳದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಅತಿಕ್ರಮಣ, ದಾಳಿಗಳು ನಡೆದು ಸಾಮ್ರಾಜ್ಯಗಳ ನಿರ್ಮಾಣ ಆಗಲಿಲ್ಲ ಎಂಬುದನ್ನು ಗಮನಿಸುವುದು ಮುಖ್ಯ. ದಕ್ಷಿಣ ಭಾರತದಲ್ಲಿದ್ದ ಚೇರಾ ರಾಜ್ಯವು, (ಈಗಿನ ಕೇರಳ ಇದರ ಒಂದು ಭಾಗ ಎಂದು ಪರಿಗಣಿಸಲ್ಪಟ್ಟಿದೆ) ಉತ್ತರದಲ್ಲಿ ನಂತರ ಮುಘಲರಿಗೆ ದಾರಿಮಾಡಿದ ಮೌರ್ಯ, ಗುಪ್ತ ಸಾಮ್ರಾಜ್ಯಗಳಿಗೆ ಹೋಲಿಸಿದರೆ ಏನೇನೂ ಇಲ್ಲ ಎನ್ನಬಹುದು. ಆದ್ದರಿಂದ ಉತ್ತರ ಭಾರತದ ರಾಜಕೀಯ-ಆಡಳಿತ ವ್ಯವಸ್ಥೆಯ ವೈಶಿಷ್ಟ್ಯವಾಗಿದ್ದ ಒಂದಲ್ಲ ಒಂದು ರೀತಿಯ ಸಿದ್ಧ ಸೈನ್ಯದ ರಚನೆಗೆ ಇಲ್ಲಿ ಅವಕಾಶವೇ ಆಗಲಿಲ್ಲ. ಇಂತಹ ಸೈನ್ಯಗಳು ಇಲ್ಲದಿರುವುದು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅವುಗಳ ಚಲನೆ, ಅವುಗಳನ್ನು ಒದಗಿಸುವ ಅಗತ್ಯ ಇವುಗಳೆಲ್ಲವೂ ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ ಬಹಳ ದುರ್ಬಲವಾಗಿತ್ತು. ಮಧ್ಯಕಾಲೀನ ಅವಧಿಯಲ್ಲಿ ಕೇರಳದ ತುಂಬ ಹರಡಿದ ಗಣ್ಯರು ಮತ್ತು ರಾಜ್ಯರು, ಸ್ವಾವಲಂಬಿತ ಗ್ರಾಮಗಳಿಂದ ಇವುಗಳನ್ನು ಪೂರೈಸಿಕೊಳ್ಳುತ್ತಿದ್ದರು. ಸಣ್ಣ ಪಾಳೇಗಾರಿಕೆಗಳ ಒಡೆಯರು, ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಕೇವಲ ಕೆಲವೇ ಸೈನಿಕರನ್ನು ತಮ್ಮ ಕೈಕೆಳಗೆ ಇರಿಸಿಕೊಂಡಿದ್ದರು.

ಕೇರಳಕ್ಕೆ ವಿಶಿಷ್ಟವಾದ ಈ ರೀತಿಯ ಸಾಮಾಜಿಕ ವ್ಯವಸ್ಥೆ ಇದ್ದರೂ ಸಹ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಿದ್ದ ನೈಸರ್ಗಿಕ ಸಂಪತ್ತಾದ ಸಮುದ್ರದಲ್ಲಿ ದೊರಕುವ ವಸ್ತುಗಳು ಮತ್ತು ಮರಮುಟ್ಟುಗಳಿಗಾಗಿ ಬರುತ್ತಿದ್ದ ವಿದೇಶೀ ವ್ಯಾಪಾರಿಗಳನ್ನು ತಡೆಗಟ್ಟಲು ಆಗಲಿಲ್ಲ. ಈ ವಿದೇಶೀ ವ್ಯಾಪಾರಿಗಳು ವಿದೇಶದಲ್ಲಿ ಮಾತ್ರ ಸಿಗುತ್ತಿದ್ದ ಕೆಲವು ಭೋಗವಸ್ತುಗಳನ್ನು ಇಲ್ಲಿನ ರಾಜರಿಗೆ ಮತ್ತು ಗಣ್ಯರಿಗೆ ಮಾರಾಟ ಮಾಡಲು ಸಾಧ್ಯವಾಯಿತು. ಪ್ರಾಚೀನ ಮತ್ತು ಮಧ್ಯಕಾಲೀನ ಕೇರಳದಲ್ಲಿ ವ್ಯಾಪಾರ ಹುಟ್ಟಿದ್ದು ಹೀಗೆ ಎಂದು ತೋರುತ್ತದೆ.

ಸಮಾಜ ಮುಂದುವರೆದಂತೆ ಮತ್ತು ಕೇರಳದ ಜನತೆ ಮತ್ತು ಭಾರತದ ಇತರ ಪ್ರದೇಶಗಳ ನಡುವೆ ವಿವಿಧ ಹಂತಗಳಲ್ಲಿ ವ್ಯವಹಾರ ಬೆಳೆದಂತೆ ಭಾರತದಲ್ಲಿ ಅಲ್ಲದೆ ವಿದೇಶೀ ವ್ಯಾಪಾರಿಗಳೂ ಹೆಚ್ಚುಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದರು. ಸ್ಥಳೀಯವಾಗಿಯೂ ಕೂಡ, ಉತ್ಪಾದನೆ ಹೆಚ್ಚು ವೈವಿಧ್ಯಗೊಂಡಿದ್ದರಿಂದ ಹೆಚ್ಚುಹೆಚ್ಚು ವಸ್ತುಗಳ ಮಾದರಿಗಳೂ ಕೂಡ ವ್ಯಾಪಾರಕ್ಕೆ ಒದಗಿತು. ಜಾತಿ ಮತ್ತು ಉಪಜಾತಿಗಳ ವ್ಯವಸ್ಥೆ ಎಷ್ಟು ಜಡವಾದಿತ್ತೆಂದರೆ, ಹೊರ ದೇಶಗಳಿಂದ ಬಂದ ವಿದೇಶೀಯರಾಗಲೀ ಅಥವಾ ಭಾರತದ ಇತರ ಭಾಗಗಳಿಂದ ಬಂದ ವ್ಯಾಪಾರಿಗಳಾಗಲೀ ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ಮತ್ತು ಉಪಜಾತಿಗಳ ವ್ಯವಸ್ಥೆಯಲ್ಲಿ ಸೇರಿಹೋಗಲು ಸಾಧ್ಯವಾಗಲಿಲ್ಲ. ಅಥವಾ ವ್ಯಾಪಾರದಲ್ಲಿ ತೊಡಗಿದ ಹೊಸ ಜಾತಿ ಅಥವಾ ಉಪಜಾತಿ ನಿರ್ಮಿಸುವ ಅಗತ್ಯವೂ ಇರಲಿಲ್ಲ. ಏಕೆಂದರೆ ಈ ರೀತಿಯ ಭಾರತೀಯರು ಮತ್ತು ವಿದೇಶೀಯರು ಸಾಕಷ್ಟು ಪರಿಣತರಾಗಿದ್ದು ಕೇರಳಕ್ಕೆ ಒಗ್ಗಿಹೋಗಿದ್ದರು.

ಬಂಡವಾಳಶಾಹಿ ಬೆಳವಣಿಗೆಯ ಮೊದಲ ಅಂಶವಾದ ಸರಕು ಉತ್ಪಾದನೆಯ ಬೆಳವಣಿಗೆಯು ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿ ದುರ್ಬಲವಾಗಿತ್ತು ಎಂಬುದನ್ನು ಇವೆಲ್ಲವೂ ಸೂಚಿಸುತ್ತದೆ. ಆದರೆ ಆಧುನಿಕ ಯುಗದಲ್ಲಿ ಅದರಲ್ಲೂ ಭಾರತದ ಇತರ ಭಾಗಗಳ ಜೊತೆ ಕೇರಳವೂ ಯೂರೋಪಿನ ಹೊಸ ಬಂಡವಾಳಶಾಹಿಯ ನೇರ ಸಂಪರ್ಕಕ್ಕೆ ಬಂದ ಮೇಲೆ ಇದು ಹಾಗೇ ಉಳಿಯಲಿಲ್ಲ. ಪೋರ್ಚುಗೀಸರು, ಡಚ್, ಫ್ರೆಂಚ್ ಮತ್ತು ಬ್ರಿಟಿಷ್ ವ್ಯಾಪಾರಿ ಕಂಪನಿಗಳು ಭಾರತದ ಉಳಿದ ರಾಜ್ಯಗಳಲ್ಲಿ ಮಾಡಿದಂತೆ ಕೇರಳದ ಸ್ವಾವಲಂಬಿ ಹಳ್ಳಿಗಳನ್ನೂ ನಾಶಮಾಡಿದುವು. ಭಾರತದಲ್ಲಿ ಆಯಿ.ತೆನ್ನಲಾದ ಎಲ್ಲಾ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಮತ್ತು ರಾಜಕೀಯ ಬದಲಾವಣೆಗಳು ಕೇರಳದಲ್ಲೂ ನಡೆದವು. ಸ್ವಾವಲಂಬಿ ಹಳ್ಳಿಗಳು, ಅವಿಭಕ್ತ ಕುಟುಂಬಗಳು ಮತ್ತು ಜಾತಿ ದೊಡ್ಡ ಹೊಡೆತ ತಿಂದವು. ಕೇರಳದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ

ಮೇಲೆ ಇದರ ಪ್ರಭಾವ ವಾಸ್ತವವಾಗಿ ದೇಶದ ಇತರ ಭಾಗಗಳಲ್ಲಿ ಆದುದಕ್ಕಿಂತ ಹೆಚ್ಚಾಗಿ ಆಯಿತು,

ಸ್ಥಳೀಯ ಜನತೆಯ ಬಳಕೆಗೆ ಮುಖ್ಯವಾಗಿ ಬೇಕಾಗಿದ್ದ ಆಹಾರ ಬೆಳೆಗಳನ್ನು ಮತ್ತು ಇತರ ಅಗತ್ಯಗಳನ್ನು ಉತ್ಪಾದಿಸುತ್ತಿದ್ದ ಕೃಷಿ ವ್ಯವಸ್ಥೆಯು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಹಾಗೆ ಮಾರ್ಪಟ್ಟಿತು. ಈ ಮಾರ್ಪಾಟು ಇತರ ಪ್ರದೇಶಗಳಿಗಿಂತ ಇಲ್ಲಿ ಹೆಚ್ಚಾಗಿ ಆಯಿತು ಎಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ. ಇದು ಎಲ್ಲರಿಗೂ ತಿಳಿದಂತೆ– ಉಳಬಹುದಾದ ಬಹಳಷ್ಟು ಭೂಮಿ ತೆಂಗಿನ ಬೆಳೆಗೆ, (ಇದರಲ್ಲಿ ಸ್ವಲ್ಪ ಭಾಗ ಮಾತ್ರ ನೇರವಾಗಿ ಬಳಕೆಯಾದರೆ ಉಳಿದ ತೆಂಗೆಲ್ಲವೂ ಎಣ್ಣೆ ಮತ್ತು ಇತರೆ ತಯಾರಿತ ವಸ್ತುಗಳಿಗೆ ಬಳಕೆಯಾಗುತ್ತದೆ) ಟೀ, ಕಾಫಿ, ರಬ್ಬರ್ ಬೆಳೆಗಳಿಗೆ ಮೀಸಲಾಗಿದೆ. ವಾಣಿಜ್ಯ ಬೆಳೆಗೆ ಮೀಸಲಾಯಿಸಿದ್ದರಿಂದ ಕೇರಳದ ಆರ್ಥಿಕ ಸ್ಥಿತಿಯ ಮೇಲಾದ ಪರಿಣಾಮವೆಂದರೆ ಕೇರಳದ ಜನತೆಯ ಬಳಕೆಗೆ ಬೇಕಾದ ಆಹಾರ ಧಾನ್ಯಗಳಲ್ಲಿ ಶೇ. 50 ಕ್ಕಿಂತ ಹೆಚ್ಚಾಗಿ ಸರಕುಗಳು ಭಾರತದ ಇತರ ರಾಜ್ಯಗಳಿಂದಾಗಲೀ, ಅಥವಾ ಹೊರದೇಶದಿಂದಾಗಲೀ ಒದಗಬೇಕಾಗಿದೆ. ಇದಕ್ಕಿಂತ ತೀವ್ರವಾದ ಸಂಗತಿಯೆಂದರೆ ಈ ವ್ಯಾಪಾರೀ ಬೆಳೆಗಳ ಉತ್ಪಾದಕರಾದ ಅಸಂಖ್ಯಾತ ಅಲ್ಪ ವ್ಯವಸಾಯಗಾರರು ಬಂಡವಾಳಶಾಹಿ ವಿಶ್ವಮಾರುಕಟ್ಟೆಯ ಕೈಕೆಳಗೆ ಬರಬೇಕಾಯಿತು. ವಿಶ್ವಮಾರುಕಟ್ಟೆಯಲ್ಲಿ ಈ ವ್ಯಾಪಾರಿ ಬೆಳೆಗಳ ಬೇಡಿಕೆ ಅಥವಾ ಬೆಲೆಗಳಲ್ಲಿ ಕುಸಿತ ಆದರೆ ಕೇರಳದ ದುಡಿಮೆಗಾರರು ನಾಶವಾಗುತ್ತಾರೆ. ಬ್ರಿಟಿಷರು ರಾಜ್ಯವಾಳುತ್ತಿದ್ದ ಕಾಲದಿಂದಲೂ ಭಾರತದ ಇತರ ಯಾವುದೇ ಭಾಗಗಳು ಇಂತಹ ತೀವ್ರ ಸಮಸ್ಯೆಯನ್ನು ಎದುರಿಸಿಲ್ಲ.

ಈ ಅಂಶದೊಡನೆ ಮತ್ತೊಂದು ಅಂಶ ಇದೆ. ಕೇರಳವೂ ಕೂಡ ಭಾರತದ ಉಳಿದ ರಾಜ್ಯಗಳಲ್ಲಂತೆಯೇ ಕೇರಳದಲ್ಲಿ ಕೂಡ ಜೀವನಕ್ಕೆ ಕರಕುಶಲ ಕೈಗಾರಿಯನ್ನೇ ಅವಲಂಬಿಸಿಕೊಂಡ ಸಹಸ್ರಾರು ಜನರು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಭಾರತವು ಪ್ರಪಂಚದ ಮಾರುಕಟ್ಟೆಗೇ ಅಂಟಿಕೊಂಡಿರುವುದರಿಂದ ಈ ವರ್ಗದ ಜನ ವಿದೇಶೀಯರಿಂದ ತೀವ್ರವಾದ ಪೈಪೋಟಿಯನ್ನು ಎದುರಿಸುತ್ತಿದ್ದಾರೆ. ವಿದೇಶೀ ಸ್ಪರ್ಧಿಗಳು ಜನತೆಗೆ ಸ್ಥಳೀಯ ಉತ್ಪಾದನೆಗಿಂತ ಕಡಿಮೆ ಬೆಲೆಗೆ ಸರಬರಾಜು ಮಾಡುವುದರಿಂದ ವಿದೇಶೀ ಮಾರುಕಟ್ಟೆಗಳು ಈಗ ಪೂರ್ಣವಾಗಿ ಇವರ ಪಾಲಿಗೆ ಮುಚ್ಚಿವೆ.

ಬ್ರಿಟಿಷ್ ರಾಜ್ಯಾಡಳಿತ ಕಾಲದಲ್ಲಿ ಭೂಸಂಬಂಧಗಳ ಬದಲಾವಣೆ ಎಂದರೆ ಕೇರಳದ ಕೆಲವು ಭಾಗಗಳಲ್ಲಿ ಜಮೀನ್ದಾರ ಮತ್ತು ಗೇಣಿದಾರ ಸಂಬಂಧದ ಬೆಳವಣಿಗೆ ಮತ್ತು ಅತ್ಯಧಿಕ ಭೂ ತೆರಿಗೆ ಮತ್ತು ಇತರ ತೆರಿಗೆಗಳ ವಸೂಲಿ ಇವೆಲ್ಲವೂ ಹಳ್ಳಿಯ ಜನತೆಯ ಸಂಕಷ್ಟಗಳನ್ನು ಹೆಚ್ಚಿಸಿವೆ. ವಿಧಾನವಾಗಿ ಬಂಡವಾಳಶಾಹಿ ಸಂಬಂಧಗಳು ಬಂದಂತೆಲ್ಲಾ ಹೆಚ್ಚಿನ ಜನರು ಕಷ್ಟವನ್ನು ಅನುಭವಿಸಲೇಬೇಕಾದ ಸ್ಥಿತಿ ಭಾರತದ ಇತರ ಭಾಗಗಳಿಗೆ ಬಂದಂತೆ ಕೇರಳಕ್ಕೆ ಕೂಡ ಬಂದಿತು. ಈ ಪ್ರಕ್ರಿಯೆಯಿಂದ ಬಂದ ದಿವಾಳಿತನ ಯಾವ ಜಾತಿ- ಉಪಜಾತಿಗಳನ್ನು ಮುಟ್ಟದೆ ಬಿಡಲಿಲ್ಲ. ಎಲ್ಲರೂ ಸಾಂಪ್ರದಾಯಿಕವಾಗಿ ಬಂದ ತಮ್ಮ ಕೆಲಸಗಳನ್ನು ಕಳೆದುಕೊಂಡರಷ್ಟೇ ಅಲ್ಲದೆ, ಹೊಸ ಕೆಲಸಗಳು ದೊರೆಯದೆ ಕಷ್ಟವನ್ನು ಅನುಭವಿಸುವ ಸ್ಥಿತಿಗೆ ಬಂದರು.

ಇದೇ ಕಾಲಕ್ಕೆ, ಹೊಸ ಆಡಳಿತ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಗಳಿಂದ ಈ ನಾಶವಾದ ವಿಭಾಗದ ಕೆಲವರಿಗೆ ಶಿಕ್ಷಕರು, ಗುಮಾಸ್ತರು, ಸೇವಕರು, ಕೆಳದರ್ಜೆ ಅಧಿಕಾರಿಗಳು ಮುಂತಾದ ಸರ್ಕಾರಿ ಕೆಲಸಗಳು ಒದಗಿದವು. ಪ್ರಾಮಾಣಿಕವಾಗಿ ವಿಧೇಯರಾಗಿ ದುಡಿದ ಈ ಜನ ಹೆಚ್ಚಿನ ಬಡ್ತಿಯ ಅವಕಾಶಗಳ ಬಗ್ಗೆಯೂ ಅಂದರೆ ಸಾಮಾನ್ಯ ಜನತೆಯಲ್ಲಿ ಅಸೂಯೆ ಹುಟ್ಟಿಸುವ ಸವಲತ್ತುಗಳುಳ್ಳ ಹಿರಿಯ ಅಧಿಕಾರಿಗಳಾಗುವ ಬಗ್ಗೆಯೂ ಆಸೆ ತಳೆದರು.

ಜಾತಿ ಉಪಜಾತಿಗಳು ಮತ್ತು ಧಾರ್ಮಿಕ ಸಂಸ್ಥೆಗಳ ತೊಡಕುಗಳನ್ನು ಮೀರಿ ನಡೆದ ವರ್ಗಗಳ ಹುಟ್ಟು, ಅನೇಕ ಶತಮಾನಗಳ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಏರುಪೇರು ಮಾಡಿತು. ದುಡಿಮೆಯ ವಿಭಜನೆಯ ಆಧಾರದ ಮೇಲೆ ಜಾತಿ ಅಥವಾ ಕೋಮುಗಳು ಉಳಿಯದೆ ಇವನು ಹೆಚ್ಚು ಕಡಿಮೆ ಎಂಬ ಸಂಬಂಧಗಳು ವ್ಯವಸ್ಥಿತಗೊಂಡವು. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಒಂದೇ ಜಾತಿ ಅಥವಾ ಕೋಮಿಗೆ ಸೇರಿದ್ದರಿಂದ ಯಾವ ವ್ಯಕ್ತಿಗಳು, ಕುಟುಂಬಗಳು ಮತ್ತು ಗುಂಪುಗಳು ಸಾಮಾಜಿಕ ಜೀವನದಲ್ಲಿ ಒಂದು ವಿಶಿಷ್ಟ ಪಾತ್ರವನ್ನು ಪಡೆದಿದ್ದವೋ ಅವೆಲ್ಲವೂ ಮುಂದೆ ವಿವಿಧ ವರ್ಗಗಳಾಗಿ ವಿಭಜಿಸಲ್ಪಟ್ಟವು.

(ಮುಂದುವರಿಯುವುದು)

ಅಂಚೆ ಇಲಾಖೆ ಉದ್ಯೋಗಿಗಳ ಸಮ್ಮೇಳನ

ಅಂಚೆ ಇಲಾಖೆಯ ಮೂರನೇ ದರ್ಜೆ ನಾಲ್ಕನೇ ದರ್ಜೆ ಉದ್ಯೋಗಿಗಳು ಮತ್ತು ಇ ಡಿ ಏಜೆಂಟರ ಸಮ್ಮೇಳನ ತುಮಕೂರಿನಲ್ಲಿ ಜೂನ್ 15ರಂದು ನಡೆಯಿತು. ಶ್ರೀ ಟಿ ಶಿವಣ್ಣ ಮತ್ತು ಶ್ರೀ ಬಿ ವಿ. ಕೃಷ್ಣಮೂರ್ತಿ ಅವರು ಜಂಟಿ ಅಧ್ಯಕ್ಷತೆ ವಹಿಸಿದ್ದರು

ತುಮಕೂರು ಜಿಲ್ಲೆಯಿಂದ 700 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅನೇಕ ಟ್ರೇಡ್‌ಯೂನಿಯನ್ ನಾಯಕರು, ಇತರ ಸಂಘಗಳ ಪ್ರತಿನಿಧಿಗಳು ಬಂದಿದ್ದರು. ತುಮಕೂರು ಎನ್.ಜಿ.ಓ. ಸಂಘದ ಶ್ರೀ ಟಿ ಕೆ. ಗೋವಿಂದರಾಜು ಅತಿಥಿಗಳಾಗಿ ಬಂದಿದ್ದರು.

ಬಹಿರಂಗ ಸಭೆಯ ಉದ್ಘಾಟನೆಯನ್ನು ಅಂಚೆ ಕಚೇರಿಗಳ ಸೂಪರಿಂಟೆಂಡೆಂಟ್ ಶ್ರೀ ಜಿ. ಬರ್ನಾರ್ಡ್ ನೆರವೇರಿಸಿದರು. ಶ್ರೀ ಎಸ್. ಕೆ. ಮೊಹಿಯುದ್ದೀನ್, ಎ.ಜಯರಾವ್, ಟಿ ಕೆ. ಗೋವಿಂದರಾಜು, ಫ್ರಾನ್ಸಿಸ್ ಮತ್ತಿತರರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಲೆಕ್ಕಪತ್ರ ಮಂಡನೆಯ ನಂತರ ಮುಂದಿನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು,

ಅಂಚೆತಂತಿ ಉದ್ಯೋಗಿಗಳ ಬೋನಸ್ ಅನ್ನು ಉತ್ಪಾದಕತೆಯ ಜೊತೆ ಸೇರಿಸಬಾರದು, ಇತರ ಕೇಂದ್ರ ಸರ್ಕಾರಿ ನೌಕರರಿಗೂ ಬೋನಸ್ ದೊರಕಬೇಕು, ಅಂಚೆ ಕಚೇರಿಗಳಿಗೆ ಒಳ್ಳೆಯ ಕಟ್ಟಡ ಒದಗಿಸಬೇಕು, ಸಿಬ್ಬಂದಿ ಕೊರತೆ ನೀಗಿಸಬೇಕು, ಇ.ಡಿ. ಏಜೆನ್ಸಿಯನ್ನು ರದ್ದುಪಡಿಸಬೇಕು, ಬಡ್ತಿ ವಿವಾದವನ್ನು ಸರಿಪಡಿಸಬೇಕು, ಕರ್ನಾಟಕದ ಅಗತ್ಯ ಸೇವಾ ಮಸೂದೆಯನ್ನು ಕೈಬಿಡಬೇಕು, ಮೈಕೋ ಕಾರ್ಮಿಕ ನಾಯಕರ ಗಡೀಪಾರನ್ನು ಹಿಂತೆಗೆದುಕೊಳ್ಳಬೇಕು ಎಂಬುದನ್ನು ಒತ್ತಾಯಿಸುವ ಬೇಡಿಕೆಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

●

ಜನರಲ್ ಎಂಪ್ಲಾಯೀಸ್ ಯೂನಿಯನ್ ಸಭೆ

ತಾ. 25-6-80ರಂದು ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯೀಸ್ ಯೂನಿಯನಿನ ಸರ್ವಸದಸ್ಯರ ಸಭೆಯು ಕಾಂ. ಎಂ. ಎನ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆ ಪ್ರಾರಂಭಕ್ಕೆ ಮೊದಲು ಮಾಜಿ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ, ಲೋಕಸಭಾ ಸದಸ್ಯ ಶ್ರೀ ಸಂಜಯಗಾಂಧಿಯವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿತು. ನಂತರ ಸಭೆಗೆ ಕಾರ್ಯದರ್ಶಿಯವರು ವರದಿಯನ್ನು ನೀಡಿದರು, ಹಾಗೆಯೇ, ಹಣಕಾಸಿನ ಪರಿಸ್ಥಿತಿಯನ್ನು ವಿವರಿಸಿದರು, ನಂತರ, ವರದಿಯ ಮೇಲೆ ಕಾಂ. ಆರ್. ಮಹದೇವ ಬಿ. ಆರ್. ರಾಜು, ವಿ. ಕೆ. ಬಾಲನ್‌ರವರು ಚರ್ಚೆ ನಡೆಸಿದರು. ಚರ್ಚೆಗೆ ಕಾರ್ಯದರ್ಶಿಯವರು ಸಮಜಾಯಿಸಿ ನೀಡಿದನಂತರ, ಮುಂದಲ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಮುಂದಲ ಸಾಲಿಗೆ, ಕಾಂ. ಎಂ.ಎನ್. ಉಗ್ರಪ್ಪನವರು ಅಧ್ಯಕ್ಷರಾಗಿಯೂ, ಕಾಂ. ಕೆ. ತಿಮ್ಮೇಗೌಡ, ವಿ.ಕೆ.ಬಾಲನ್, ಬಿ.ಆರ್. ರಾಜು, ಪಿ ಆರ್. ಮುತ್ತುರವರು ಉಪಾಧ್ಯಕ್ಷರಾಗಿಯೂ, ಕಾಂ. ಎಂ. ಶೇಖರ್ ಪ್ರಧಾನಕಾರ್ಯದರ್ಶಿಯಾಗಿಯೂ, ಕಾಂ. ಆರ್. ಮಹದೇವ, ಎಂ. ಎಲ್. ರಾಜು ಕಾರ್ಯದರ್ಶಿಯಾಗಿಯೂ, ಕಾಂ. ಎನ್. ಪುಟ್ಟಸ್ವಾಮಿ ಖಜಾಂಚಿಯಾಗಿಯೂ ಚುನಾಯಿತರಾದರು. ನಂತರ ಸಭೆಯನ್ನು ಉದ್ದೇಶಿಸಿ ಕಾಂ. ಸಿ. ಕೆ. ಮೋನ್‌ರವರು ಮಾತನಾಡಿ, ವಂದನಾರ್ಪಣೆ ಸಲ್ಲಿಸುವುದರ ಜೊತೆಗೆ ಸಭೆ ಮುಕ್ತಾಯವಾಯಿತು.

○

ಅಕ್ಕಿ ಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕರ ಸಂಘ

ತಾ. 24-6-80ನೇ ಮಂಗಳವಾರ ಸಂಜೆ 8 ಗಂಟೆಗೆ ಶಿವಮೊಗ್ಗದಲ್ಲಿ ಹಮಾಲಿ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆ ಸೇರಿ, ಅಕ್ಕಿ ಗಿರಣಿ ಕೆಲಸಗಾರರೂ ಸಂಘಕ್ಕೆ ಸೇರಲು ಅನುಕೂಲವಾಗುವಂತೆ ಸಂಘದ ಹೆಸರು ಅಕ್ಕಿ ಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕರ ಸಂಘವೆಂದು ಬದಲಾವಣೆ ಮಾಡಿರುತ್ತಾರೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರೂ ಮತ್ತು ನ್ಯಾಯವಾದಿಗಳೂ ಆದ ಕಾಂ. ಬಿ. ತಿರುಕೊಪ್ಪನವರು ವಹಿಸಿದರು. ಸಭೆಯನ್ನುದ್ದೇಶಿಸಿ, ಕಾಂ. ಚೆಂದುಕುಟ್ಟಿ ಮತ್ತು ಶ್ರೀಗಳಾದ ಪಿ. ಶಂಕರನಾರಾಯಣ, ಕಾಸಿಂ ಸಾಬಿ, ಹೆಚ್. ನಾಗಪ್ಪ ಮುಂತಾದವರು ಮಾತನಾಡಿ ಸಂಘವನ್ನು ಬಲಪಡಿಸಲು ಕರೆ ನೀಡಿದರು. ಅಲ್ಲದೆ ಕೆಳಗೆ ಕಂಡವರನ್ನೊಳಗೊಂಡ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಇದರಲ್ಲಿ ಕಾಂ. ಬಿ. ತಿರುಕೊಪ್ಪ ಅಧ್ಯಕ್ಷರು, ಶ್ರೀಗಳಾದ ಕಾಸಿಂ ಸಾಬಿ, ಹೆಚ್. ನಾಗಪ್ಪ, ರಹೀದ್ ಮತ್ತು ಬೈರಾನಾಯಕ್ ಉಪಾಧ್ಯಕ್ಷರುಗಳು, ಕಾಂ. ಚಂದುಕುಟ್ಟಿಯವರು ಕಾರ್ಯದರ್ಶಿ, ಶ್ರೀಗಳಾದ ಖಾಸಿಂ ಖಾನ್, ಸೋಮಸುಂದರ ಶೆಟ್ಟಿ, ರಾಯಮಸ್ತಪ್ಪನಾಯ್ಕ ಮತ್ತು ವೆಂಕಯ್ಯ, ಮಂಜಪ್ಪನಾಯ್ಕ ಜೊತೆ ಕಾರ್ಯದರ್ಶಿಗಳು ಮತ್ತು ಶ್ರೀ ಪಿ. ಶಂಕರನಾರಾಯಣನ್ ಖಜಾಂಚಿ ಮತ್ತು 25 ಸಮಿತಿ ಸದಸ್ಯರುಗಳು ಇರುವರು,

○

ನಾಲ್ಕನೇ ದರ್ಜೆ ನೌಕರರ ಸಂಘದ ಸಭೆ

ಕೋಲಾರ ಜಿಲ್ಲೆಯ ಶಿಡ್ಲಘಟ್ಟದ ಕರ್ನಾಟಕ ರಾಜ್ಯಸರ್ಕಾರಿ ನಾಲ್ಕನೇ ದರ್ಜೆ ನೌಕರರ ಸಂಘದ ತಾಲ್ಲೂಕು ಮಟ್ಟದ ಸರ್ವಸದಸ್ಯರ ಸಭೆಯು ಸ್ಥಳೀಯ ಸಂಘದ ಅಧ್ಯಕ್ಷರಾದ ಕೆ. ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ 23-6-80ರಂದು ನಡೆಯಿತು. ಜೆ. ದೊರೆಸ್ವಾಮಿಯವರು ಸಭೆಯಲ್ಲಿ ಭಾಗವಹಿಸಿದ್ದರು.

ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಜೂನ್ 28ರಂದು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲು ತೀರ್ಮಾನಿಸಲಾಗಿತ್ತು. ಕೇಂದ್ರ ಸಂಘದ ಕರೆಯ ಮೇರೆಗೆ ದಿನಾಂಕ 3-7-80ರಂದು ತಾಲ್ಲೂಕು ಕಚೇರಿಯ ಮುಂದೆ ಕೆಲಸದ ವೇಳೆಯಲ್ಲಿ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದೆ,

○

ಹೋಟೆಲ್ ಕಾರ್ಮಿಕರ ಹೋರಾಟ

ಬೆಂಗಳೂರಿನ ಅಲಸೂರಿನ ಹೋಟೆಲ್ ಲಿಡೋ ಕಾರ್ಮಿಕರು ನಡೆಸಿದ್ದ ಹೋರಾಟ ಈಗ ಮುಗಿದು ಲೇಬರ್ ಆಫೀಸರ ಸಮ್ಮುಖದಲ್ಲಿ ತೀರ್ಮಾನ ಆಗಿದೆ. ಇಬ್ಬರನ್ನುಳಿದು ಎಲ್ಲ ಕಾರ್ಮಿಕರನ್ನೂ ಮಾಲೀಕರು ಕೆಲಸಕ್ಕೆ ಸೇರಿಸಿಕೊಂಡು ಅವರಿಗೆ ಕಾನೂನಿನ ರೀತಿ ಪರಿಹಾರವನ್ನು ಒಂದು ತಿಂಗಳಿನಲ್ಲಿ ಕೊಡುವುದಾಗಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ,

ಆದರೆ ಹೋಟೆಲ್ ಗ್ರ್ಯಾಂಡ್ ನ್ಯಾಷನಲ್ ಮುಚ್ಚಿ 36 ದಿವಸಗಳಾಗಿವೆ. ಕೆಲಸದಿಂದ ವಜಾ ಆದ 16 ಕಾರ್ಮಿಕರು ಹೋಟೆಲಿನ ಎದುರು ಧರಣಿ ಮುಷ್ಕರ ನಡೆಸಿದ್ದಾರೆ. 1967ರಲ್ಲಿ ಸಂಘದ ಚಟುವಟಿಕೆಗಳನ್ನು ಈ ಮಾಲೀಕರು ಪೋಲೀಸರ ಮೂಲಕ ದಮನ ಮಾಡಿದ್ದರು. 1972ರಲ್ಲೂ ಪೋಲೀಸ್ ಪ್ರಹಾರಗಳಿಂದ ಸಂಘದ ಏರ್ಪಾಟು ಮುರಿದಿತ್ತು, ಈಗಲೂ ಮಾಲೀಕರು ಕ್ರೂರಿಯಾಗಿ ವರ್ತಿಸುತ್ತಿದ್ದಾರೆ. ಆದರೆ ಕಾರ್ಮಿಕರು ಹೋರಾಟ ಮುಂದುವರಿಸಲು ದೃಢವಾಗಿ ನಿರ್ಧರಿಸಿದ್ದಾರೆ. ಎಲ್ಲ ಕಾರ್ಮಿಕ ಸಂಘಗಳು ಇದನ್ನು ಬೆಂಬಲಿಸಬೇಕೆಂದು ಕೋರಲಾಗಿದೆ,

○

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ನೀಡಿದ್ದಾರೆ, ಶ್ರೀಮಂತರ ರೂ. 1,50,000 ಲಕ್ಷ ಮೌಲ್ಯದವರೆಗಿನ ಸಂಪತ್ತಿನ ಮೇಲೆ ತೆರಿಗೆ ರಿಯಾಯಿತಿ ಕೊಡಲಾಗಿದೆ. ಕೃಷಿ ಸಂಪತ್ತಿನ ಮೇಲಿನ ತೆರಿಗೆಯನ್ನು ಸಂಪೂರ್ಣ ತೆಗೆದುಹಾಕಲಾಗಿದೆ.

ಅಂದರೆ, ಉಳಿತಾಯ ಬಂಡವಾಳ ಹೂಡುವ ದೃಷ್ಟಿಯಿಂದ ಶ್ರೀಮಂತರ ಬೊಕ್ಕಸದಲ್ಲಿ ಇನ್ನಷ್ಟು ಆದಾಯ ಶೇಖರವಾಗುವಂತೆ ಈ ಮುಂಗಡಪತ್ರದಲ್ಲಿ ಮಾಡಲಾಗಿದೆ. ಆದರೆ, ಶ್ರೀಮಂತವರ್ಗದವರು ಭೂಮಾಲಕರು, ಬಂಡವಾಳಶಾಹಿಗಳು ತಮ್ಮ ಸಂಪತ್ತು ಆದಾಯವನ್ನು ಆರ್ಥಿಕ ಅಭಿವೃದ್ಧಿಗೇ ವಿನಿಯೋಗಿಸುವರೆಂದು ಏನು ಭರವಸೆ? ಅವರು ಇನ್ನಷ್ಟು ಉಳಿಸಲಿ, ಬಂಡವಾಳ ಹೂಡಲಿ ಎಂದು ಕೃಷಿ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಇನ್ನಷ್ಟು ತೆರಿಗೆಗಳಲ್ಲಿ ರಿಯಾಯಿತಿ ತೋರಿಸಲಾಗಿದೆ. ಆದರೆ, ಅನುಭವದಿಂದ ತಿಳಿದು ಬರುವುದೇನೆಂದರೆ, ಶ್ರೀಮಂತರ ಬೊಕ್ಕಸದಲ್ಲಿದ್ದ ಸಂಪತ್ತು ಆದಾಯ ಅನುತ್ಪಾದಿತ ವಿಷಯಗಳಿಗೂ ಸುಖಭೋಗಗಳಿಗೂ, ರಾಜಕೀಯ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲಿಕ್ಕೂ, ಪ್ರತಿಸ್ಪರ್ಧಿಗಳನ್ನು ಸೋಲಿಸಲಿಕ್ಕೂ, ಅಕ್ರಮಸಂಗ್ರಹ ಕಳ್ಳಸಂತೆಯಂತಹ ಆರ್ಥಿಕ ಅಪರಾಧಗಳಲ್ಲಿ ತೊಡಗಲಿಕ್ಕೂ, ರೈತ-ಕಾರ್ಮಿಕ ಸಂಘಟನೆಗಳನ್ನು ಹತ್ತಿಕ್ಕಲಿಕ್ಕೂ ದುರುಪಯೋಗಿಸಲಾಗುತ್ತಿದೆ.

ಉತ್ಪಾದನೆ ಮತ್ತು ಸರಬರಾಜಿಗೆ ಖಾಸಗೀಕ್ಷೇತ್ರವನ್ನೇ ಹೆಚ್ಚಾಗಿ ನಂಬಿಕೊಂಡಿರುವುದರಿಂದ, ಉತ್ಪಾದನೆ ನಿರೀಕ್ಷೆಗಿಂತ ಕಡಿಮೆಯಾಗಿ ಆರ್ಥಿಕ ಸ್ಥಗಿತ ಉಂಟಾಗುವುದು. ಶ್ರೀಮಂತರ-ಭೂಮಾಲಕರ ಮತ್ತು ಬಂಡವಾಳಶಾಹಿಗಳ ಆದಾಯ ಸಂಪತ್ತು ಹೆಚ್ಚಿದಂತೆ ಆರ್ಥಿಕ ಅಸಮಾನತೆ ಹೆಚ್ಚುವುದು. ಬಡ ಹಾಗೂ ಮಧ್ಯಮವರ್ಗದ ಜನರ ಆದಾಯವು ಕ್ಷೀಣಿಸುತ್ತಾ ಅವರ ಗ್ರಾಹಕಶಕ್ತಿಯು ಕುಂದುವುದು, ಉತ್ಪಾದಿತ ವಸ್ತುಗಳಿಗೆ ಆಂತರಿಕ ಮಾರುಕಟ್ಟೆಯಲ್ಲಿ ಗ್ರಾಹಕರಿಲ್ಲದಂತಾಗುವುದು. ವಿದೇಶಿ ಮಾರುಕಟ್ಟೆಗಳನ್ನು ಅರಸುವುದರಿಂದ ಪರಾವಲಂಬಿಗಳಾಗಿರಬೇಕಾಗುವುದು. ಈ ಮಧ್ಯೆ, ಸರ್ಕಾರದ ಅನುತ್ಪಾದಿತ ವೆಚ್ಚಗಳು, ಮಿಲಿಟರಿ, ಪೋಲೀಸು, ಆಡಳಿತ, ಧನಸಹಾಯ, ಇತ್ಯಾದಿಗಳು ಹೆಚ್ಚುತ್ತಲೇ ಇರುವುದರಿಂದ ಆರ್ಥಿಕ ಅಭಿವೃದ್ಧಿಯು ಹಿಂದುಳಿಯುವುದು. ಪರಿಣಾಮವಾಗಿ ಬೆಲೆಏರಿಕೆ, ಹಣದುಬ್ಬರ ಹೆಚ್ಚುತ್ತಲೇ ಇರುವುದು. ಕೇಂದ್ರ ಮುಂಗಡಪತ್ರದಲ್ಲಿ ಬಂಡವಾಳಶಾಹಿ ಪದ್ಧತಿಯ ಈ ವೈರುಧ್ಯಗಳನ್ನು ಆಮೂಲಾಗ್ರವಾಗಿ ಹೋಗಲಾಡಿಸಲು ಯಾವ ಸೂಚನೆಗಳೂ ಇಲ್ಲ. ಹಳೆಯದನ್ನೇ ಹೊಸತಾಗಿ ಮೇಲ್ನೋಟಕ್ಕೆ ಸಮಾಧಾನವಾಗಿರುವಂತೆ ಮುಂಗಡಪತ್ರದಲ್ಲಿ ಪರಿಹಾರ ಸೂಚಿಸಲಾಗಿದೆ. ಅವುಗಳು ಫಲಕಾರಿಯಾಗುವುದರ ಬಗ್ಗೆ ಧೋರಣೆಯನ್ನು ರೂಪಿಸುವವರಿಗೇ ಭರವಸೆ ಇಲ್ಲ.

ಆದುದರಿಂದಲೇ 1980-81ರ ಆರ್ಥಿಕ ಮುನ್ನೋಟದಲ್ಲಿ ಮತ್ತು ಮುಂಗಡಪತ್ರದಲ್ಲಿ ಅಂತಿಮವಾಗಿ ಬೆಲೆ ನಿಯಂತ್ರಣ ಹಾಗೂ ಆರ್ಥಿಕ ಅಭಿವೃದ್ಧಿಗೆ 'ಯೋಗ್ಯ ಮಳೆ'ಯನ್ನೇ ಅವಲಂಬಿಸಲಾಗಿದೆ. ಮಳೆರಾಯ ಬೆಲೆ ಇಳಿಸೋ ಎಂದು ಮೊರೆ ಇಡಲಾಗಿದೆ! ಇಷ್ಟಕ್ಕಾಗಿ ಜನರು ಇಂದಿರಾ ಕಾಂಗ್ರೆಸ್‌ನ್ನು 2/3 ನೇ ಬಹುಮತದಿಂದ ಅಧಿಕಾರಕ್ಕೇರಿಸಬೇಕಿತ್ತೇ ?

●

ಪತ್ರಿಕಾ ಸಂಪಾದಕರಿಗೆ ಬೆದರಿಕೆ

ಗುಲ್ಬರ್ಗದ ಬಸವಕ್ರಾಂತಿ ಪತ್ರಿಕೆಯಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಮೇಲೆ ಬಂದ ಹಣ ದುರುಪಯೋಗದ ವರದಿಯಿಂದ ಕೆರಳಿದ ಆರೋಪಿಯ ಕಡೆಯವರು ಈಗ ಸಂಪಾದಕರಿಗೆ ಬೆದರಿಕೆ ಹಾಕುತ್ತಿದ್ದಾರೆ. ಒತ್ತಾಯದಿಂದ ವಿ ಶೀ. ಸ್ವಾಮಿಯವರನ್ನು ಕರೆದೊಯ್ದು, ಖರ್ಗೆ ಮತ್ತು ಲಕ್ಷ್ಮಣ ಜವಳಕರ್, ಖಡಣೆ ಮುಂತಾದವರು ಅವರನ್ನು ನಿಂದಿಸಿ ಬೆದರಿಸಿ ಕಳುಹಿಸಿದ್ದಾರೆ. ಅವರ ಮುದ್ರಣಾಲಯ ಮತ್ತು ಜೀವಕ್ಕೆ ಬೆದರಿಕೆಯನ್ನೂ ಹಾಕಿದ್ದಾರೆ. ಗುಲ್ಬರ್ಗದ ಪ್ರಗತಿಪರ ಶಕ್ತಿಗಳು ಈ ಖಂಡನೀಯ ಕ್ರಮವನ್ನು ಪ್ರತಿಭಟಿಸಿ ಪತ್ರಿಕಾಸ್ವಾತಂತ್ರ್ಯ ಉಳಿಸಬೇಕಾಗಿದೆ.

●

ತ್ರಿಪುರ ಮುಖ್ಯಮಂತ್ರಿಗಳ ಮನವಿ

ತ್ರಿಪುರದಲ್ಲಿ ಅತ್ಯಂತ ದುರ್ಘಟನೆಗಳು ನಡೆದಿವೆ, ಬುಡಕಟ್ಟು ಜನರು ಮತ್ತು ಬುಡಕಟ್ಟಿಗೆ ಸೇರದ ಜನರ ನಡುವೆಯಿಂದ ಮೈತ್ರಿಯ ಉಜ್ವಲ ಪರಂಪರೆಯು ಈಗ ಕಲಹ ಗಲಭೆಗಳಿಂದ ನಾಶವಾಗಿ ನೂರಾರು ಸಾವುಗಳು ಸಂಭವಿಸಿವೆ. ಗಾಯಗೊಂಡ ನೂರಾರು ಮಂದಿಗೆ ವೈದ್ಯಕೀಯ ನೆರವು ಬೇಕಾಗಿದೆ. ದಂಗೆ ಮತ್ತು ಲೂಟಿಯಲ್ಲಿ ಎಲ್ಲವನ್ನೂ ಕಳೆದುಕೊಂಡವರ ಸಂಖ್ಯೆ ಒಂದು ಲಕ್ಷ ಮೀರಿದೆ. ನಿರಾಶ್ರಿತರಿಗೆ ಆಶ್ರಯ, ಆಹಾರ, ವೈದ್ಯಕೀಯ ನೆರವು ಮತ್ತು ಪುನರ್ವಸತಿ ಸಹಾಯ ಕೊಡಬೇಕಾಗಿದೆ,

ಇಂಥ ಸಮಸ್ಯೆಯನ್ನು ನಿರ್ವಹಿಸುವುದು ತ್ರಿಪುರದಂಥ ಸಣ್ಣ ಮತ್ತು ಹಿಂದುಳಿದ ರಾಜ್ಯಕ್ಕೆ ಕಷ್ಟವಾಗಿದೆ, ಇದನ್ನು ರಾಷ್ಟ್ರೀಯ ದುರ್ಘಟನೆಯೆಂದು ಪರಿಗಣಿಸಬಹುದು. ಆದ್ದರಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹಣ, ಇತರ ವಸ್ತುಗಳು ಮುಂತಾದುವನ್ನು ಉದಾರವಾಗಿ ದಾನಮಾಡುವಂತೆ ಎಲ್ಲ ರಾಜ್ಯಸರ್ಕಾರಗಳು ಮತ್ತು ಉದಾರಿ ಸಾರ್ವಜನಿಕರಿಗೆ, ಅವರ ಸಹಾಯ ಸಂಸ್ಥೆಗಳಿಗೆ ನಾವು ಮನವಿ ಮಾಡುತ್ತೇವೆ.

ಕೇಂದ್ರಸರ್ಕಾರ ಕೃಪೆಯಿಟ್ಟು ಸಹಾಯ ನೀಡಿದೆ, ತ್ರಿಪುರದ ಜನತೆಯ ಸಹಾಯದೊಡನೆ ಆ ಪಾರಂಪರಿಕ ಮೈತ್ರಿಯನ್ನು ಮತ್ತೆ ತರಲು, ನಾಶವಾದ ಹಳ್ಳಿಗಳನ್ನು ಮತ್ತೆ ನಿರ್ಮಿಸಲು ನಮಗೆ ಸಹಾಯವಾಗಬಹುದು. ಈ ಪರೀಕ್ಷೆಯ ಸಮಯದಲ್ಲಿ, ತ್ರಿಪುರವನ್ನು ಮತ್ತೆ ಪ್ರಜಾಪ್ರಭುತ್ವ ಮತ್ತು ಶಾಂತಿಯ ನೆಲೆವೀಡು ಮಾಡುವಂಥ ಪ್ರತಿಜ್ಞೆ ಕೈಗೊಳ್ಳೋಣ.

ನೃಪೇನ್ ಚಕ್ರವರ್ತಿ
ಮುಖ್ಯಮಂತ್ರಿ
ತ್ರಿಪುರ

ಹುಣಿಸೆಕೋಟೆಯಲ್ಲಿ ಬೃಹತ್ ಕಾರ್ಮಿಕ ಪ್ರದರ್ಶನ

ದಲಿತ ರೈತಕಾರ್ಮಿಕ ಶ್ರೀ ಶೇಷಗಿರಿಯಪ್ಪನವರ ಕಗ್ಗೊಲೆಯನ್ನು ಖಂಡಿಸುವ ಸಲುವಾಗಿ ಹಾಗೂ ಬೆಂಗಳೂರಿನಲ್ಲಿ ದಲಿತರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸುವ ಸಲುವಾಗಿ ಕಾಂ. ಟಿ.ಎಸ್. ಮಣಿಯವರ ನೇತೃತ್ವದಲ್ಲಿ ದಿನಾಂಕ ೨೯-೬-೮೦ನೇ ಭಾನುವಾರದಂದು ಕೋಲಾರ ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಪಕ್ಷದ ಕಾರ್ಯಕರ್ತರ ಹಾಗೂ ಕಾರ್ಮಿಕರ ಮೆರವಣಿಗೆಯನ್ನು ಟೇಕಲ್‌ನಿಂದ ಹುಣಿಸೇಕೋಟೆಗೆ ತೆಗೆದುಕೊಂಡು ಹೋಗಿ ಅಲ್ಲಿಯ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು, ನಂತರ ಅಲ್ಲಿ ಸೇರಿದ್ದ ಊರ ಜನರನ್ನು ಹಾಗೂ ಕಾರ್ಮಿಕರನ್ನು ಉದ್ದೇಶಿಸಿ ಒಡನಾಡಿಗಳಾದ ಟಿ.ಎಸ್. ಮಣಿ, ತು. ಸ. ಅಶ್ವತ್ಥನಾರಾಯಣ, ಜಗನ್ನಾಥ, ಲಕ್ಷ್ಮಣರೆಡ್ಡಿ ಮತ್ತು ಶ್ರೀನಿವಾಸರೆಡ್ಡಿಯವರು ಮಾತನಾಡಿ ದಲಿತ ಶೇಷಗಿರಿಯಪ್ಪನವರ ಕಗ್ಗೊಲೆಯನ್ನು ಮಾಡಿದ ಕೃಷ್ಣೇಗೌಡನಿಗೆ ಸರ್ಕಾರ ಇನ್ನೂ ಬೆಂಬಲ ನೀಡುತ್ತಿರುವುದನ್ನು ಹಾಗೂ ಇದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿಯ ಮೂಲಕ ತಿಳಿಸಲು ಹುಣಿಸೇಕೋಟೆಯಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಹೋದ ದಲಿತರ ಮೇಲೆ, ಇದನ್ನು ವರದಿಮಾಡಲು ಬಂದ ವರದಿಗಾರರ ಮೇಲೆ ನಡೆದ ಅಮಾನುಷ ಪೋಲೀಸ್ ದೌರ್ಜನ್ಯವನ್ನು ಸಭೆಯಲ್ಲಿ ಖಂಡಿಸಲಾಯಿತು. ಹುಣಿಸೇಕೋಟೆಯ ಸಾಮಾನ್ಯ ಜನರು ಒಂದಾಗಿ ಇಂತಹ ಅಮಾನುಷ ಕೃತ್ಯವನ್ನು ಎದುರಿಸಬೇಕೆಂದು ಇದಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸದಾ ಬೆಂಬಲನೀಡುವುದೆಂದು ಇಲ್ಲದೆ ಇದ್ದರೆ ಶೇಷಗಿರಿಯಪ್ಪನವರ ಕುಟುಂಬಕ್ಕೆ ಆದ ಅನ್ಯಾಯದಂತೆ ಇನ್ನೂ ಎಷ್ಟು ಕುಟುಂಬಗಳು ಎದುರಿಸಬೇಕಾಗುವುದೆಂಬ ಎಚ್ಚರಿಕೆ ನೀಡಿದರು, ಇಲ್ಲಿ ಕಲ್ಲುಕುಟುಕರಿಗೆ ಆಗುವ ಅನ್ಯಾಯವನ್ನು ಖಂಡಿಸಿ ಅವರು ಸಂಘ ಸ್ಥಾಪಿಸಲು ಕರೆ ನೀಡಿದರು. ಮೆರವಣಿಗೆಯಲ್ಲಿ 600ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದು ಸಭೆಗೆ ಊರಿನಜನರೆಲ್ಲ ಬಂದು ಕೇಳಿ ಈ ಐತಿಹಾಸಿಕ ಮೆರವಣಿಗೆಯನ್ನು ವೀಕ್ಷಿಸಿದರು.

●

ಪೌರಕಾರ್ಮಿಕರ ಧರಣಿ ಮುಷ್ಕರ

ಮೈಸೂರು ನಗರಸಭೆಯು ಈಗ ಮೈಸೂರು ನಗರ ಸಮಿತಿಯಾಗಿ ಪರಿವರ್ತನೆಯಾದರೂ ಕಾರ್ಮಿಕರ ಬವಣೆ ಮೊದಲಿನ ಹಾಗೇ ಇದೆ. ನಾಗರಿಕ ಸೌಲಭ್ಯಗಳು ದುರ್ಲಭವಾಗಿವೆ. ನಗರ ಸಮಿತಿಯ ಕಚೇರಿ ಆಸ್ಪತ್ರೆ ಇತ್ಯಾದಿಗಳಲ್ಲಿ ಲಂಚಕೋರತನ ತಾಂಡವವಾಡುತ್ತಿದೆ.

ಮೈಸೂರು ನಗರಕ್ಷೇತ್ರ ಹೆಚ್ಚಾದರೂ ಪೌರಕಾರ್ಮಿಕರ ಸಂಖ್ಯೆ ಹೆಚ್ಚಾಗಿಲ್ಲ. ಅವರಿಗೆ ಕೆಲಸದ ಹೊರೆ ಹೆಚ್ಚಿದೆ. ಈ ತೊಂದರೆಗಳೆಲ್ಲವನ್ನೂ ಗಮನಿಸಿ ಅವರು ಜುಲೈ 2ರಂದು ಕಾರ್ಪೊರೇಷನ್ ಕಚೇರಿಯ ಮುಂದೆ ಧರಣಿ ಮುಷ್ಕರ ನಡೆಸಿದ್ದಾರೆ. ನಿವೃತ್ತಿಯಾದವರಿಗೆ ಗ್ರಾಚುಯಿಟಿ ನೀಡಿಕೆ, ಸೈಟು ಹಂಚಿಕೆ, ಹೆಚ್ಚು ಪೌರಕಾರ್ಮಿಕರ ನೇಮಕ ಇತ್ಯಾದಿ ಬೇಡಿಕೆಗಳನ್ನು ಅಲ್ಲಿ ಮಂಡಿಸಲಾಗುತ್ತದೆ,

○

ಹೊಸಕೋಟೆ ತಾ. ರೈತಸಂಘ ಹೋರಾಟದೊಂದಿಗೆ ಆರಂಭ

ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ರೈತಸಂಘವು ಜೂನ್ 26ರಂದು ಹೋರಾಟದೊಂದಿಗೇ ಆರಂಭವಾಯಿತು.

ಸಣ್ಣಪುಟ್ಟ ಪ್ರಮಾಣದಲ್ಲಿ ರೈತರ ಮತ್ತು ಬೇಸಾಯ ಕೂಲಿಗಾರರ ನೆರವಿಗೆ ಬರುತ್ತಿದ್ದ ಜಿಲ್ಲಾ ರೈತಸಂಘದ ಸದಸ್ಯ ಕಾಂ. ಗೋಪಾಲ್ ಮೇಲೆ ಹೊಸಕೋಟೆ ತಾಲ್ಲೂಕಿನ ನಾಗನಾಯಕನಕೋಟೆ ಗ್ರಾಮದ ಊರಗೌಡರ ಕಡೆಯವರು ಜೂನ್ 20ರಂದು ಹಲ್ಲೆಮಾಡಿದ್ದರು. ಈ ಹಲ್ಲೆಯನ್ನು ಪ್ರತಿಭಟಿಸಿ ಹೊಸಕೋಟೆ ತಾಲ್ಲೂಕು ರೈತಸಂಘದವರು ಜೂನ್ 26ರಂದು ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿದ್ದರು. ಅಂದು ಸಂಜೆ ನಾಗನಾಯಕನ ಕೋಟೆಯ ಭೂಹೀನ ಕೃಷಿಕೂಲಿಗಾರರು ಮತ್ತು ಬಡರೈತರು ಸೇರಿ ತಾವು ಉತ್ತಿದ್ದ ಸರ್ಕಾರಿ ಬಂಜರು ಭೂಮಿಯನ್ನು ತಮ್ಮೂರಿಗೆ ಆಗಮಿಸಿದ್ದ ರಾಜ್ಯ ರೈತಸಂಘದ ಅಧ್ಯಕ್ಷ, ಖಜಾಂಚಿ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯವರಿಗೆ ಕರೆದುಕೊಂಡು ಹೋಗಿ ತೋರಿಸಿದರು.

ಬಡವರ ಭೂಮಿಯ ಮೇಲೆ ಕೆಂಬಾವುಟ :

ಊರಿನಾಚೆ ದಿಣ್ಣೆ ಪ್ರದೇಶದಲ್ಲಿ ಕಲ್ಲು ಬಂಡೆಗಳ ನಡುವೆ ಅರ್ದಂಬರ್ದ ಉತ್ತಿದ್ದ ಕಲ್ಲು ಮಿಶ್ರಿತ ಖುಷ್ಕಿ ಭೂಮಿಯ ಸುತ್ತಲೂ ಬೇಸಾಯ ಕೂಲಿಗಾರರು, ಬಡರೈತರು ಮತ್ತು ಇವರನ್ನು ಬೆಂಬಲಿಸಲು ಬಂದಿದ್ದ ಬೆಂಗಳೂರು ನಗರದ ಹಲವಾರು ಕಾರ್ಮಿಕರು ಹಾಗೂ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ನಿಂತರು, ಆ ಭೂಮಿಯ ಮೇಲೆ ಕೆಂಬಾವುಟವನ್ನು ವಿದ್ಯುಕ್ತವಾಗಿ ಹಾರಿಸುವುದರ ಮುಖಾಂತರ 'ಬಡರೈತರು ಕೂಲಿಗಾರರು ಉತ್ತಿರುವ ಈ ಭೂಮಿ ಇವರದೇ, ಇದನ್ನು ಇವರಿಂದ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಘೋಷಿಸಿದ ಬೆಂಗಳೂರು ಜಿಲ್ಲಾ ಸಿ.ಪಿ.ಐ.(ಎಂ) ಕಾರ್ಯದರ್ಶಿ ಕಾಂ. ವಿ ಜೆ. ಕೆ. ನಾಯರ್ ಅವರು ಈ ಬಡರೈತರ ಬೆಂಗಾವಲಾಗಿ ರೈತಸಂಘ ನಿಲ್ಲಲಿ ಎಂದರು.

(7ನೇ ಪುಟ ನೋಡಿ)

ರಾಯಚೂರಿನಲ್ಲಿ ಲಾರಿ ಕಾರ್ಮಿಕರ ಸಂಘಟನೆ

ರಾಯಚೂರು ಜಿಲ್ಲೆಯಲ್ಲಿ ಲಾರಿ ಸಾರಿಗೆ ಉದ್ಯಮವನ್ನು ಅವಲಂಬಿಸಿ ಬದುಕುತ್ತಿರುವ 600ಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಅವರು ಇಡೀ ಜಿಲ್ಲೆಯಲ್ಲಿ ಹರಡಿ ಹೋಗಿರುವುದರಿಂದ ಅವರನ್ನು ಸಂಘಟಿಸಲು ಇದುವರೆಗೆ ಕಷ್ಟವಾಗಿತ್ತು. ಅನೇಕ ಕಾರ್ಮಿಕ ಮುಖಂಡರು ಹಿಂದೆ ಸಂಘಟನೆಯ ಹೆಸರಿನಲ್ಲಿ ಕಾರ್ಮಿಕರಿಗೆ ಮೋಸ ಮಾಡಿದ್ದರು. ಆದರೆ ಈಗ ಸಿ. ಐ. ಟಿ. ಯು. ನೇತೃತ್ವದಲ್ಲಿ ಕಾರ್ಮಿಕರು ಸಂಘಟಿತರಾಗುತ್ತಿದ್ದಾರೆ.

ಒಂದು ಲಾರಿಗೆ ಒಬ್ಬನೇ ಡ್ರೈವರ್ ಮತ್ತು ಕ್ಲೀನರ್ ನೇಮಿಸಿಕೊಂಡು ಲಾರಿಮಾಲೀಕರು ಅವರನ್ನೇ ಹಗಲಿರುಳು ಶೋಷಿಸುತ್ತಿದ್ದಾರೆ. ಅವರಿಗೆ 150-300ವರೆಗೆ ಮಾತ್ರ ಸಂಬಳ ಕೊಟ್ಟು ತಾವು ಹಣ ದೋಚುತ್ತಿದ್ದಾರೆ. ಈ ಚಾಲಕರ, ಕ್ಲೀನರುಗಳ ಕೆಲಸ ಇನ್ನೂ ಖಾಯಂ ಆಗಿಲ್ಲ. ಕಾನೂನಿನ ಪ್ರಕಾರ ಅವರಿಗೆ ಸಮವಸ್ತ್ರ ಕೊಡುತ್ತಿಲ್ಲ. ಅಲ್ಲದೆ ಚಾಲಕರ ಮೇಲೆ ಪೋಲೀಸ್ ದಬ್ಬಾಳಿಕೆಗೆ ಅಂತೂ ಹೇಳತೀರದು.

ಈ ಶೋಚನೀಯ ಸ್ಥಿತಿಯನ್ನು ನಿವಾರಿಸಿಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಕಾರ್ಮಿಕರು ಸಂಘ ರಚಿಸಿ ಜೂನ್ 25ರಂದು ಸಭೆ ಕರೆದಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಚಂದ್ರಶೇಖರ ಬಾಳೆ ವಹಿಸಿದ್ದರು. ಸಿ. ಐ. ಟಿ. ಯು. ನಗರ ಕಾರ್ಯದರ್ಶಿ ಕಾಂ. ಕಲಾಲ ಬಂಡೆಪ್ಪನವರು ಕಾರ್ಮಿಕರ ಸಮಸ್ಯೆಗಳು, ಸಂಘಟನೆಯ ಅವಶ್ಯಕತೆ ಇವುಗಳನ್ನು ವಿವರಿಸಿದರು.

ಲಾರಿಚಾಲಕರಿಗೆ 350ರೂ. ಮತ್ತು ಕ್ಲೀನರ್‌ಗಳಿಗೆ 175ರೂ. ವೇತನ ನೀಡಬೇಕು, ಪ್ರತಿ ಲಾರಿಗೆ ಇಬ್ಬರು ಚಾಲಕರು ಇಬ್ಬರು ಕ್ಲೀನರ್‌ಗಳನ್ನು ನೇಮಿಸಬೇಕು, ದಿನಭತ್ಯ 10 ಮತ್ತು 6ರೂ. ಕೊಡಬೇಕು. ಒಂದು ವರ್ಷ ದುಡಿದವರನ್ನು ಖಾಯಂಗೊಳಿಸಬೇಕು, ಸಮವಸ್ತ್ರ, ಬೋನಸ್, ಪ್ರಾವಿಡೆಂಟ್ ಫಂಡ್ ಸೌಲಭ್ಯ ಒದಗಿಸಬೇಕು, ಸರ್ಕಾರವು ಅಗತ್ಯ ಸೇವಾ ಕಾಯಿದೆಯನ್ನು ಹಿಂತೆಗೆದುಕೊಳ್ಳಬೇಕು-ಈ ಬೇಡಿಕೆಗಳ ಈಡೇರಿಕೆಗೆ ಹೋರಾಡಲು ಲಾರಿಕಾರ್ಮಿಕರು ತೀರ್ಮಾನಿಸಿದ್ದಾರೆ.

ರಾಯಚೂರು ಜಿಲ್ಲಾ ಸಮಿತಿಗೆ ಏಳು ಜನರನ್ನು ಆಯ್ಕೆಮಾಡಲಾಗಿದೆ.

○

ಹೊಸಪೇಟೆಯಲ್ಲಿ ಮಹಿಳಾ ಸಂಘದ ಉದ್ಘಾಟನೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ "ಪ್ರಗತಿಪರ ಮಹಿಳಾ ಸಂಘ"ವನ್ನು 24-6-80 ರಂದು ಉದ್ಘಾಟಿಸಲಾಯಿತು. ಶ್ರೀ ಭೀಮಸೇನಾಚಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಿಳೆಯ ದುಃಖವನ್ನು ಚಿತ್ರಿಸುವ ಜಾನಪದ ಗೀತೆಯೊಂದಿಗೆ ಸಭೆ ಪ್ರಾರಂಭವಾಯಿತು. ಉಷಾ ಅವರು ಸ್ವಾಗತಿಸಿದ ನಂತರ, ಗೀತಾ ಹೆಚ್. ಎನ್. ಅವರು ಮಹಿಳೆಯರ ಸಂಘಟನೆಯ ಅಗತ್ಯವನ್ನು ವಿವರಿಸಿದರು, ಸಂಘಟನೆಯ ಉದ್ದೇಶವನ್ನು ಕುರಿತು ಯಶೋಧರಾ ಅವರು ಮಾತನಾಡಿದರು. ನಂತರ ಸಭೆಯ ಸಭಿಕರಲ್ಲಿ ಕಮಲ, ಭೀಮಕ್ಕ, ಜುಬೇದ ಬಾನು ಅವರು ಮಾತನಾಡಿದರು.

●

ಹೊಸಕೋಟೆ ತಾ. ರೈತಸಂಘ ಹೋರಾಟದೊಂದಿಗೆ ಆರಂಭ

(6ನೇ ಪುಟದಿಂದ)

ಕೆಂಬಾವುಟಗಳನ್ನು ಹಿಡಿದುಕೊಂಡು ರೈತಕೂಲಿಗಾರರ ಪರ ಘೋಷಣೆಗಳನ್ನು ಕೂಗಿಕೊಂಡು ಹೊರಟ ಈ ಹಳ್ಳಿಗರ ಮೆರವಣಿಗೆ ಆ ಊರಿಗೆ ಅದೇ ಮೊದಲು. ಇದನ್ನು ನೋಡಲು ಅಕ್ಕಪಕ್ಕದ ರೈತರು ಅಲ್ಲಲ್ಲಿ ರಸ್ತೆಯಂಚಿನಲ್ಲಿ ನಿಂತಿದ್ದರು. "ಆ ಭೂಮಿಯನ್ನೇಕೆ ಅಳೆಯಲಿಲ್ಲ" ? ಎಂದು ತನ್ನ ಕೈಯನ್ನು ಒಂದು ಹೊಲದ ಕಡೆಗೆ ತೋರಿಸಿದಳು ತನ್ನ ಎದುರಿಗೆ ಸಿಕ್ಕ ಅರವತ್ತು ವರ್ಷದ ಹಣ್ಣಣ್ಣು ಮುದುಕಿ, ಮೆರವಣಿಗೆಕಾರರಲ್ಲಿ ಓರ್ವನಿಗೆ ಕೇಳಿದ ಪ್ರಶ್ನೆ ಇದು. 'ಇಂದಲ್ಲ ನಾಳೆ ಅದನ್ನೂ ಅಳೆಯುತ್ತೇವೆ ಅಜ್ಜಿ' ಎಂದು ವಿಶ್ವಾಸದಿಂದ ಹೇಳಿದ ಮೆರವಣಿಗೆಕಾರ ತನ್ನ ಜೊತೆಗಾರರಿಗೆ ಹೇಳಿದ "ಈ ಅಜ್ಜಿ ನಮ್ಮನ್ನ ಗೌರ್ಮೆಂಟ್‌ನೋರು ಅಂತ ತಿಳ್ಕಂಡಿರಂಗವ್ಳೆ".

"ಯಾವಾಗ ಅಳಿತಾರೊ ಅಪ್ಪ, ವಾದ್‌ವರ್ಷ ಹತ್ ಗಾಡಿ ಗೊಬ್ಬರ ಹಾಕಿದ್ದೆ. ಈ ವರ್ಷ ಆ ಗೌಡ್ರು ಮನೆಯವ್ರು ನಮ್ಗಿಂತ ಮದ್ಲೇ ನೇಗ್ಲು ಕಟ್ಟಿದ್ರು. ಕೇಳಕ್ಕೊಗಿದ್ದಿಕೆ ಉಗ್ದು ಅಟ್ಟಿದ್ರು" ಎಂದು ಹೇಳುತ್ತಾ ಬರುತ್ತಿದ್ದ ಅಜ್ಜಿ ತನ್ನ ಭೂಮಿಯ ಕಡೆಗೇ ಮತ್ತೆ ಮತ್ತೆ ನೋಡುತ್ತಿದ್ದಳು. ಯುವಕ ರೈತಕೂಲಿಕಾರರ ಜೊತೆಗೆ ಹೆಜ್ಜೆಗಳನ್ನು ಹಾಕಲಾರದ ಅಜ್ಜಿ ಹಿಂದೆ ಬಿದ್ದಳು.

ನಾಗನಾಯಕನ ಹಳ್ಳಿಯಲ್ಲಿ ಒಂದು ಪುಟ್ಟ ಸಾರ್ವಜನಿಕ ಸಭೆ ಸಭೆಯನ್ನುದ್ದೇಶಿಸಿ ಮಾತನಾಡಿದ ಹೊಸಕೋಟೆ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ ಮನೋಹರ್; 'ಈ ಭೂಮಿಯನ್ನು ಶತಾಯ ಗತಾಯ ಬಿಡಬಾರದು. ಕೊನೆಗೆ ರಾಜ್ಯದ ಮುಖ್ಯಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ಮಾಡಿಯಾದರೂ ಭೂಮಿಯನ್ನು ಬಡವರದನ್ನಾಗಿ ಸಿಕೊಳ್ಳೋಣ' ಎಂದು ಉತ್ಸಾಹ ತುಂಬಿದರು.

ಮತ್ತೆ ಮೆರವಣಿಗೆ ಮುಂದಕ್ಕೆ ಹೊರಟಿತು ತನ್ನೆಲ್ಲ ಸಿಟ್ಟು ಆಕ್ರೋಶಗಳ ಘೋಷಣೆಗಳೊಡನೆ. ರೈತಸಂಘದ ಕಾರ್ಯಕರ್ತ ಗೋಪಾಲನ ಮೇಲೆ ಹಲ್ಲೆ ಮಾಡಿದ್ದ ಊರ ಗೌಡರ ಮನೆಯವರಿಗೆ ಧಿಕ್ಕಾರವನ್ನು ಅವರು ಹೇಳುತ್ತಿದ್ದರು. ಮುಕ್ಕಾಲು ಮೇಲು ಹೊಲಗದ್ದೆಗಳ ನಡುವೆ ನಡೆದು ಬಂದ ರೈತಸಂಘದ ಮೆರವಣಿಗೆ ಸಮೇತನಹಳ್ಳಿ ಗ್ರಾಮ ಸೇರಿತು. ಗ್ರಾಮದ ಮುಖ್ಯ ಬೀದಿಗಳಲ್ಲಿ ತಮ್ಮ ಘೋಷಣೆಗಳನ್ನು ಹಾಕುತ್ತಾ ಸಂಚರಿಸಿದ ನಂತರ ಸಾರ್ವಜನಿಕ ಸಭೆ. ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಪ್ರಸಿದ್ಧ ವಕೀಲರೂ ಮತ್ತು ಬೆಂಗಳೂರು ಜಿಲ್ಲಾ ರೈತಸಂಘದ ಉಪಾಧ್ಯಕ್ಷರಲೊಬ್ಬರಾದ ಕಾಂ. ರಾಮಯ್ಯ ವಹಿಸಿದ್ದರು. ರೈತರು ಮತ್ತು ಕೂಲಿಗಾರರು ಪೋಲೀಸ್ ಠಾಣೆ, ಜೈಲು, ಕೋರ್ಟು ಕಚೇರಿಗಳಿಗೆ ಜಗ್ಗದೆ ಧೈರ್ಯವಾಗಿರಬೇಕೆಂತಲೂ ರೈತಸಂಘವನ್ನು ತಮ್ಮ ತಾಲ್ಲೂಕಿನಲ್ಲಿ ಬಲಿಷ್ಟವಾಗಿ ಕಟ್ಟಿ ಇಡೀ ರಾಜ್ಯಕ್ಕೇ ಮಾದರಿಯಾಗಬೇಕೆಂದು ಆಶಿಸಿದರು. ಕಾಂ. ವಿ. ಜೆ. ಕೆ ನಾಯರ್ ಅವರು ಮಾತನಾಡಿ ರೈತಸಂಘದ ಎಲ್ಲ ಹೋರಾಟಗಳಿಗೆ ತಮ್ಮ ಪಕ್ಷದ ಬೆಂಬಲ ಮತ್ತು ಪ್ರೋತ್ಸಾಹ ಇದೆ ಎಂದರು.

ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ದಲಿತಕವಿ ಸಿದ್ಧಲಿಂಗಯ್ಯ, ರಾಜ್ಯ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ ಹಾಗೂ ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್ ಮಾತನಾಡಿದರು.

ಸಭೆಯ ಆರಂಭದಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಕ್ರಾಂತಿ ಗೀತೆಗಳನ್ನು ಹಾಡಿದರು. ಸ್ಥಳೀಯ ಉನ್ನತ ವಿದ್ಯಾವಂತ ದಲಿತ ತರುಣ ಮುನಿಸ್ವಾಮಿ ಸ್ವಾಗತಿಸಿದರು. ಮನೋಹರ್ ವಂದಿಸಿದರು.

●

"ಅವಶ್ಯಕ ಸೇವಾ ಮಸೂದೆಯನ್ನು ಹಿಂತೆಗೆದುಕೊಳ್ಳಲು ಬೀಡಿ ಕಾರ್ಮಿಕರ ಒತ್ತಾಯ"

ಕರ್ನಾಟಕ ಸರಕಾರವು ಜಾರಿ ಮಾಡಲು ಪ್ರಯತ್ನಿಸುತ್ತಿರುವ ಅವಶ್ಯಕ ಸೇವಾ ನಿರ್ವಹಣಾ ಮಸೂದೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಮಂಗಳೂರು ತಾಲ್ಲೂಕು ಕೋಟೆಕಾರ್ ಸರ್ಕಲಿನ ಬೀಡಿ ಕಾರ್ಮಿಕರು ಒತ್ತಾಯಿಸಿರುತ್ತಾರೆ. ಈ ಕಾರ್ಮಿಕ ವಿರೋಧಿ ಮಸೂದೆಯನ್ನೂ, ಸಿ. ಐ. ಟಿ.ಯು ರಾಜ್ಯಸಮಿತಿಯ ಅಧ್ಯಕ್ಷರೂ ವೈಕೋ ನೌಕರರ ಸಂಘದ ಅಧ್ಯಕ್ಷರೂ ಆದ ಕಾಮ್ರೇಡ್ ಎಸ್. ಸೂರ್ಯನಾರಾಯಣರಾವ್ ಮತ್ತು ಇತರ ಕಾರ್ಮಿಕ ಮುಂದಾಳುಗಳನ್ನು ಬೆಂಗಳೂರಿನಿಂದ ಗಡೀಪಾರು ಮಾಡುವ ಪ್ರಯತ್ನಗಳನ್ನು ಕೂಡಲೇ ಕೈಬಿಡಬೇಕೆಂದು ಜೂನ್ 29 ರಂದು ತೊಕ್ಕೋಟಿನಲ್ಲಿ ಜರಗಿದ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನಿನ ವಾರ್ಷಿಕ ಮಹಾಸಭೆಯು ಸರಕಾರವನ್ನು ಒತ್ತಾಯಿಸಿರುತ್ತದೆ.

ಸಭೆಯನ್ನುದ್ದೇಶಿಸಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು.ನ ಉಪಾಧ್ಯಕ್ಷರಾದ ಕಾಮ್ರೇಡ್ ಬಿ. ಮಾಧವ ಅವರು ದೇಶದ ಮತ್ತು ರಾಜ್ಯದ ಕಾರ್ಮಿಕ ವರ್ಗದ ಮುಂದಿರುವ ಸಮಸ್ಯೆಗಳನ್ನು ವಿವರಿಸಿ, ಕಾರ್ಮಿಕ ವರ್ಗವು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕಾದ ಅವಶ್ಯಕತೆಯನ್ನು ಒತ್ತಿಹೇಳಿದರು. ಬಂಡವಾಳಶಾಹಿ ವ್ಯವಸ್ಥೆಯ ಪರಿಣಾಮವಾಗಿ ದಿನದಿಂದ ದಿನಕ್ಕೆ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದ್ದು, ಈ ಬಿಕ್ಕಟ್ಟಿನ ಭಾಗವನ್ನು ದುಡಿಯುವ ವರ್ಗದ ಮೇಲೆ ಹೇರಲು ಸರಕಾರವು ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿ, ಶೋಷಣೆಯಿಂದ ಮುಕ್ತವಾದ ಹೊಸ ಸಮಾಜವನ್ನು ಕಟ್ಟಲು ಕಾರ್ಮಿಕ ವರ್ಗವು ಹೋರಾಟಕ್ಕೆ ಸಜ್ಜಾಗಬೇಕೆಂದು ಅವರು ಕರೆ ನೀಡಿದರು.

ದ. ಕ. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಮ್ರೇಡ್ ಯು. ಜನಾರ್ಧನ ನಾಯಕ್ ಬೀಡಿ ಕಾರ್ಮಿಕರ ಮುಂದಾಳು ಕಾಂ. ಗೋಪಾಲ, ಕಾಂ. ಕೆ. ಆನಂದ ಗಟ್ಟಿ, ಕಾಂ. ಯು. ರಾಮಚಂದ್ರ, ಎಚ್. ಗೋಪಾಲ, ಯು ಬಿ ಮಾರಪ್ಪ, ಯು. ಬಿ. ಲೋಕಯ್ಯ ಮೊದಲಾದವರು ಮಾತನಾಡಿದರು.

ಯೂನಿಯನಿನ ಅಧ್ಯಕ್ಷರಾದ ಕಾಂ. ಕೆ. ನಾರಾಯಣ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಜತೆಕಾರ್ಯದರ್ಶಿ ಕಾಂ. ಯು. ಬಿ. ನಾರಾಯಣ ಆರಂಭದಲ್ಲಿ ಸ್ವಾಗತಿಸಿದರು.

1980-81ನೇ ಸಾಲಿಗೆ ಕಾಂ. ಕೆ. ನಾರಾಯಣ ಶೆಟ್ಟರನ್ನು ಅಧ್ಯಕ್ಷರಾಗಿಯೂ, ಕಾಂ. ಯು ಬಿ. ಲೋಕಯ್ಯ ಕಾರ್ಯದರ್ಶಿಯಾಗಿಯೂ, ಕಾಂ. ರಾಜೀವರನ್ನು ಕೋಶಾಧಿಕಾರಿಯಾಗಿಯೂ ಇರುವ 25 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಒಂದು ಸಾವಿರ ಬೀಡಿಗೆ ರೂ. 9-00ರಂತೆ ಕೂಲಿ ನಿಗದಿ ಮಾಡಬೇಕೆಂದೂ, ಶೇಕಡಾ 20ರಂತೆ ಬೋನಸ್ ಕೊಡಬೇಕೆಂದೂ ಒತ್ತಾಯಿಸುವ ಠರಾವನ್ನು ಅಂಗೀಕರಿಸಲಾಯಿತು. ನವಮಂಗಳೂರು ಬಂದರಲ್ಲಿ ಸಿ. ಐ. ಟಿ. ಯು. ಕಾರ್ಯಕರ್ತರ ಮೇಲೆ ಇಂಟಕ್‌ನ ಗುಂಡಾಗಳು ತೀವ್ರ ಹಲ್ಲೆ ನಡೆಸಿದುದನ್ನು ಖಂಡಿಸುವ ಠರಾವನ್ನು ಅಂಗೀಕರಿಸಲಾಯಿತು.

ಕಾಂ. ಯು. ಬಿ. ನಾರಾಯಣರು ವಂದನಾರ್ಪಣೆ ಮಾಡಿದರು.

ಪದಾಧಿಕಾರಿಗಳ ಆಯ್ಕೆ

ಕುದುರೆಮುಖದ ಎಚ್. ಎಸ್. ಸಿ.ಎಲ್. ಎಂಪ್ಲಾಯಿಸ್ ಅಸೋಸಿಯೇಷನ್‌ಗೆ 1680-81ನೇ ಇಸವಿಗೆ ಈ ಕೆಳಗಿನ ಪದಾಧಿಕಾರಿಗಳು ಸರ್ವಾನುಮತದಿಂದ ಆಯ್ಕೆಯಾಗಿರುವರು.

ಅಧ್ಯಕ್ಷ ಕಾಂ. ಕೆ. ರಾಮದಾಸ್ ಆಚಾರಿ ; ಉಪಾಧ್ಯಕ್ಷರುಗಳು-ಕಾಂ. ಜೋನ್ ಕೋರ್ನೆಲ್ಲೊ ಮತ್ತು ಕಾಂ. ಎ. ಕೆ. ಬಾಲಕೃಷ್ಣನ್; ಪ್ರಧಾನ ಕಾರ್ಯದರ್ಶಿ - ಕಾಂ. ಕೆ, ಬಾಬಣ್ಣ; ಜಂಟೀ ಕಾರ್ಯದರ್ಶಿಗಳು- ಕಾಂ. ಹಾಲೇಶಪ್ಪ ಮತ್ತು ಕಾಂ. ತಿಪ್ಪೇಶ್; ಸಂಘಟನಾ ಕಾರ್ಯದರ್ಶಿಗಳು-ಕಾಂ. ಶ್ರೀಕುಮಾರ್. ಎಸ್, ಮತ್ತು ಕಾಂ. ವಲೇರಿಯನ್ ರೋಡ್ರಿಗಸ್; ಖಜಾಂಚಿ ಕಾಂ. ರುದ್ರಪ್ಪ ಮತ್ತು ಜೊತೆ ಖಜಾಂಚಿಯಾಗಿ ಕಾಂ, ಆರ್, ವಿಶ್ವನಾಥ ಆಯ್ಕೆಯಾಗಿರುವರು.

●

ನಾಗರಿಕ ಸಮಿತಿಯಿಂದ ಉಚಿತ ಪುಸ್ತಕ ವಿತರಣೆ

ಮಂಗಳೂರಿನ ಕಂಕನಾಡಿಯ ಗ್ರಾಮ ನಾಗರಿಕ ಸಮಿತಿಯ ವತಿಯಿಂದ ಈ ಪ್ರದೇಶದ ಬಡವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ಹಂಚಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೀವವಿಮೆ ನೌಕರರ ಸಂಘದ ದಕ್ಷಿಣವಲಯದ ಉಪಾಧ್ಯಕ್ಷ ಶ್ರೀ. ಬಿ. ಮಾಧವ ಅವರು ವಹಿಸಿದ್ದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿ ಎಂ. ಮಾಧವ ಅವರು ಸ್ವಾಗತಿಸಿ, ಯುವಕರು ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಕರೆಕೊಟ್ಟರು. ಅಧ್ಯಕ್ಷರು ನಾಗರಿಕ ಸಮಿತಿಯ ಕಾರ್ಯವನ್ನು ಶ್ಲಾಘಿಸಿ ಶಿಕ್ಷಣ ಕ್ಷೇತ್ರದ ದೌರ್ಬಲ್ಯಗಳನ್ನು ನಿವಾರಿಸಲು ಹೋರಾಟ ಮಾಡಬೇಕೆಂದು ಹೇಳಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಕೆನರಾ ಬ್ಯಾಂಕ್ ಡಿವಿಜನಲ್ ಕಚೇರಿಯ ಶ್ರೀ ಬಿ. ಬೋಜ ಮತ್ತು ಶ್ರೀ ಎಂ. ಎನ್. ಭಟ್ ಅವರು ಬಡಜನತೆಗೆ ಬ್ಯಾಂಕಿನಿಂದ ಏನೇನು ಸೌಲಭ್ಯಗಳು ದೊರಕುತ್ತವೆ ಎಂಬುದನ್ನು ವಿವರಿಸಿದರು. 300ಮಂದಿ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪುಸ್ತಕಗಳನ್ನು ಪಡೆದರು. ಸಮಿತಿಯ ಗೌರವ ಅಧ್ಯಕ್ಷ ಶ್ರೀ ಕೆ. ಪಿ. ವಿ. ರಾವ್ ಸಮಿತಿಗೆ ಸಹಕರಿಸಿದವರನ್ನು ವಂದಿಸಿದರು. ಕಾರ್ಯದರ್ಶಿ ಶ್ರೀ ನಾಗೇಶ್ ಧನ್ಯವಾದ ಅರ್ಪಿಸಿದರು.

○

ಲಂಕೇಶ್ ಪತ್ರಿಕೆ ಬಿಡುಗಡೆ

ಖ್ಯಾತ ಕನ್ನಡ ಸಾಹಿತಿ, ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕ ಪಿ. ಲಂಕೇಶರು ಸಂಪಾದಕರಾಗಿ ಅವರೇ ಪ್ರಕಟಿಸುತ್ತಿರುವ "ಲಂಕೇಶ್ ಪತ್ರಿಕೆ" ಎಂಬ ಹೊಸ ಕನ್ನಡ ವಾರಪತ್ರಿಕೆಯನ್ನು 'ಡೆಕ್ಕನ್ ಹೆರಾಲ್ಡ್' ಸಂಪಾದಕ ಕೆ. ಎನ್. ಹರಿಕುಮಾರ್ ಅವರು ಜುಲೈ 2ರಂದು ಬೆಂಗಳೂರಿನಲ್ಲಿ ವಿದ್ಯುಕ್ತವಾಗಿ ಬಿಡುಗಡೆ ಮಾಡಿದರು. ಕನ್ನಡ ಜಾಣಜಾಣೆಯರಿಗಾಗಿ ತರಲಾಗುತ್ತಿರುವ ಪತ್ರಿಕೆಗೆ ಮತ್ತು ಸಾಹಿತಿ ಲಂಕೇಶರಿಗೆ ಅವರು ಶುಭ ಹಾರೈಸಿದರು.

ದಲಿತರು, ಮಾರ್ಕ್ಸ್‌ವಾದಿಗಳು, ಲೋಹಿಯಾವಾದಿಗಳು, ಪತ್ರಕರ್ತರು; ಸಿನಿಮಾ ಹಾಗೂ ರಂಗಭೂಮಿ ಕಲಾವಿದರು ಮತ್ತು ಲಂಕೇಶರ ಆತ್ಮೀಯ ಸ್ನೇಹಿತರು ಮಿತಪ್ರಮಾಣದಲ್ಲಿ ಸೇರಿದ್ದ ಸರಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಹೆಚ್. ಎಂ. ಟಿ. ಸಂಸ್ಥೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಚೌಡಯ್ಯ ಅವರು, ಜನತೆಯು ಪತ್ರಿಕೆಗಳಿಂದ ನಿರೀಕ್ಷಿಸಿದಷ್ಟು ಅವರಿಗೆ ಸಿಕ್ಕುತ್ತಿಲ್ಲ – ಆ ಕೊರತೆಯನ್ನು ಲಂಕೇಶ್ ಪತ್ರಿಕೆ ನೀಗಲಿ ಎಂದರು. ಹುಚ್ಚು ಧೈರ್ಯ ಮಾಡಿ ಹೊಸದಾಗಿ ಆರಂಭಿಸಿರುವ ಲಂಕೇಶ್ ಪತ್ರಿಕೆಯನ್ನು ನಾವೆಲ್ಲ ಉಳಿಸಿಕೊಳ್ಳೋಣ ಎಂದೂ ಸಹ ಚೌಡಯ್ಯ ನುಡಿದರು.

ತಮ್ಮ ಆಹ್ವಾನ ಮನ್ನಿಸಿ ಸಮಾರಂಭಕ್ಕೆ ಹಾಜರಾದ ಗೆಳೆಯ–ಗೆಳತಿಯರನ್ನು ಕಂಡು ಸಂತೋಷ ವ್ಯಕ್ತಪಡಿಸಿದ ಲಂಕೇಶ್ ಅವರು ಜನತೆಗೆ ದುಃಖವಾಗುವಂತಹ, ಅವರಿಗೆ ಅವಮಾನವಾಗುವಂತಹ ಪತ್ರಿಕೆಯನ್ನು ತಾವು ತರುವುದಿಲ್ಲವೆಂತಲೂ ಮತ್ತು ಅಂತಹ ಸಂದರ್ಭ ಬಂದರೆ ಪತ್ರಿಕೆಯನ್ನೇ ತಾವು ಮುಚ್ಚಲು ನಿರ್ಧರಿಸುತ್ತೇವೆಂತಲೂ ನುಡಿದರು.

○

ಆಗಸ್ಟ್ 12, 13, 14, ರಂದು ರಾಜ್ಯ ಕಿಸಾನ್ ಕನ್ಸಿಲ್ ಸಭೆ

ಕರ್ನಾಟಕ ಪ್ರಾಂತ ರೈತಸಂಘದ ಪದಾಧಿಕಾರಿಗಳ ಸಭೆಯು 1-7-80 ರಂದು ಬೆಂಗಳೂರಲ್ಲಿ ಸೇರಿತು. ಪ್ರಚಲಿತ ರಾಜಕೀಯ ಪರಿಸ್ಥಿತಿ, ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶದ ಬಡಜನರ ಪರಿಸ್ಥಿತಿ, ಸಂಘಟನಾ ಬೆಳವಣಿಗೆ ಇತ್ಯಾದಿಗಳನ್ನು ಚರ್ಚಿಸಿದ ಸಭೆಯು ಆಗಸ್ಟ್ 12, 13 ಮತ್ತು 14 ರಂದು ರಾಜ್ಯಮಂಡಲಿ(ಕೌನ್ಸಿಲ್) ಸಭೆಯನ್ನು ನಡೆಸಲು ನಿರ್ಣಯಿಸಿತು. ಕೌನ್ಸಿಲ್ ಸಭೆಯು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದ ಸಮೀಪದ ಹಳ್ಳಿಯಲ್ಲಿ ನಡೆಯಲಿದೆ. ಅಖಿಲ ಭಾರತ ಕಿಸಾನ್ ಸಭಾ ಮುಖಂಡರನ್ನೂ ಆಹ್ವಾನಿಸಲು ತೀರ್ಮಾನಿಸಲಾಗಿದೆ.

○

....ಮೈಕೋ ಕಾರ್ಮಿಕರ ಕೊಡುಗೆ

(ಒಂದನೇ ಪುಟದಿಂದ)

ಯಾವಷ್ಟು ಕಾಲವೂ ಈ ಸಹಾಯವನ್ನು ನೀಡಲು ಮೈಕೋ ಕಾರ್ಮಿಕರು ನಿರ್ಣಯಿಸಿ ಅಕ್ಕಿ ಮತ್ತು ಹಣ ಸಂಗ್ರಹ ಮಾಡುತ್ತಲಿರುವರು.

ಇದೇ ರೀತಿ ತಾತಗುಣಿ ಎಸ್ಟೇಟ್ ಕಾರ್ಮಿಕರಿಗೂ, ಹಾಗೂ ಮೆಟಲ್ ಲ್ಯಾಂಪ್ ಕೇಪ್ಸ್ (ಹೋರಾಟದಲ್ಲಿರುವ) ಕಾರ್ಮಿಕರಿಗೂ ಸಹಾಯ ಮಾಡಲೂ ನಿರ್ಣಯಿಸಲಾಗಿದೆ. ಯೂನಿಯನ್ ವಕ್ತಾರರ ವರದಿಯಂತೆ ಮೈಕೋ ಕಾರ್ಮಿಕರಿಂದ ಸಂಗ್ರಹಿಸಿದ ದವಸಧಾನ್ಯಗಳು ಯೂನಿಯನ್ ಆಫೀಸೆಲ್ಲಾ ತುಂಬಿದೆ. ಸೌಹಾರ್ದ ಕಾರ್ಯಕ್ಕೆ ಇವರಲ್ಲಿರುವ ಉತ್ಸಾಹಕ್ಕೆ ಇದೇ ಸಾಕ್ಷಿ. ಹೆಚ್ಚು ವೇತನ ಪಡೆಯುತ್ತಲಿರುವ ಮೈಕೋ ಕಾರ್ಮಿಕರ ಬಗ್ಗೆ ಟೀಕಿಸುತ್ತಿದ್ದ ಮಂದಿ, ಮುಖಂಡತ್ವ ಸರಿ ಇದ್ದಲ್ಲಿ ಕಾರ್ಮಿಕರು ಯಾವ ತ್ಯಾಗಮಾಡಲೂ ಸಿದ್ಧ ಎಂಬುದನ್ನು ತಿಳಿಯಬೇಕು. ಹಾಗೆಯೇ ನಗರದ ಸಂಘಟಿತ ಕಾರ್ಮಿಕ ವರ್ಗವೂ, ಮೈಕೋ ಕಾರ್ಮಿಕರು ಹಾಕಿಕೊಟ್ಟಿರುವ ಆದರ್ಶವನ್ನು ಪಾಲಿಸಬೇಕು. "ಆಗಲೇ ನಗರದ ಎಲ್ಲಾ ಕಾರ್ಮಿಕರು ಒಂದಾಗುವುದು; ಆಗಲೇ ರಾಜ್ಯದ ಎಲ್ಲಾ ಕಾರ್ಮಿಕರೂ, ರಾಷ್ಟ್ರದ ಎಲ್ಲಾ ದುಡಿಯುವ ಜನರೂ ಒಂದಾಗುವುದು; ಹೀಗಾದಾಗಲೇ ಜಗತ್ತಿನ ಎಲ್ಲಾ ಕಾರ್ಮಿಕರೂ ಒಂದಾಗಲು ಸಾಧ್ಯ".

○

ಚಿಂತಾಮಣಿ ತಾಲ್ಲೂಕಿನಲ್ಲಿ ಎಸ್.ಎಫ್.ಐ. ಸಭೆ

ಕರ್ನಾಟಕ ರಾಜ್ಯದ ಎಸ್.ಎಫ್.ಐ. ಸಂಘಟನೆಯನ್ನು ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆಯವರೆಗೆ ವಿಸ್ತರಿಸಬೇಕೆಂಬ ರಾಜ್ಯಸಮಿತಿ ನಿರ್ಣಯದ ಮೇರೆಗೆ ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಎಸ್. ಎಫ್. ಐ. ಶಾಖೆಯು ಚಿಲಕನೇರ್ಪು ಹೋಬಳಿಯ ಬುರುಡುಗುಂಟೆ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಭೆ ಸೇರಿಸಿತ್ತು. ಕಾಂ. ನಾರಾಯಣಸ್ವಾಮಿಯವರು ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಕಾರ್ಯಕ್ರಮ ಮತ್ತು ಧೋರಣೆಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಚಿಂತಾಮಣಿ ತಾಲ್ಲೂಕು ಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ಹರೀಂದ್ರ ಅವರು ಶೋಷಣೆಯ ವಿರುದ್ಧ ಸ್ಥಳೀಯವಾಗಿ ನಡೆಯುವ ಹೋರಾಟಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದರು. ಉಪಾಧ್ಯಕ್ಷ ಜಯಪ್ರಸಾದ ರೆಡ್ಡಿ, ಉಪಕಾರ್ಯದರ್ಶಿ ಜಿ. ವಿ. ಸುಬ್ಬಾರೆಡ್ಡಿ, ರಘುನಾಥ ರೆಡ್ಡಿ ಮತ್ತು ಟಿ. ಎನ್. ಶಿವಾರೆಡ್ಡಿಯವರು ಸಭೆಯಲ್ಲಿ ಭಾಗವಹಿಸಿದ್ದರು. ನಂತರ ಬುರುಡುಗುಂಟೆ ಹೈಸ್ಕೂಲು ಸಮಿತಿಯನ್ನು ರಚಿಸಲಾಯಿತು. ●

ಜಿಲ್ಲಾಧಿಕಾರಿಗೆ ಮನವಿ

ತಾ. 29ರಂದ ಸಿಟಿ ಬಸ್ಸುಗಳ ಮಾಲಕರು ಬಸ್ಸುದರವನ್ನು ಏಕಪಕ್ಷೀಯವಾಗಿ ಏರಿಸಿದರ ವಿರುದ್ಧ ತಾ. 30-6-80ರಂದು ಜಿಲ್ಲಾ ಸಿ.ಐ.ಟಿ.ಯು. ಸಮಿತಿಯ ವತಿಯಿಂದ, ಸಮಿತಿಯ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ, ಜೊತೆಕಾರ್ಯದರ್ಶಿ ಕಾಂ. ಯು. ಬಿ. ಲೋಕಯ್ಯ ಮತ್ತು ಕಾಂ. ಕೆ.ಪಿ. ಸಾಲಿಯಾನರು ಮನವಿಯೊಂದನ್ನು ಜಿಲ್ಲಾಧಿಕಾರಿಯವರಿಗೆ ಅರ್ಪಿಸಿದರು. ಅದರಲ್ಲಿ ಏರಿಸಿದ ದರದಿಂದಾಗಿ ಶ್ರಮಜೀವಿಗಳಿಗೆ ಹಾಗೂ ಜನಸಾಮಾನ್ಯರಿಗೆ ಆಗುವ ಕಷ್ಟವನ್ನು ವಿವರಿಸಿದರು. ಮಾಲಕರ ಹಾಗೂ ಸಾರ್ವಜನಿಕರ ಪ್ರತಿನಿಧಿಗಳ ಸಭೆಯನ್ನು ಕರೆದು ಇದನ್ನು ಇತ್ಯರ್ಥಮಾಡಬೇಕೆಂದು ವಿನಂತಿಸಿಕೊಳ್ಳಲಾಗಿದೆ. ●

ಪರಿಹಾರ ಕಾರ್ಯಕ್ಕೆ ಸಹಾಯ ಮಾಡಲು ಕರೆ

ಇತ್ತೀಚೆಗಿನ ಘಟನೆಗಳಿಂದ ತೀವ್ರ ಕಷ್ಟನಷ್ಟಗಳಿಗೆ ಒಳಗಾದ ಪುಟ್ಟ ರಾಜ್ಯ ತ್ರಿಪುರಾದಲ್ಲಿ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಿಗಾಗಿ ಎಡರಂಗ ಸರಕಾರವು ಎಂಟು ಕೋಟಿ ನಲವತ್ತೈದು ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಸಿದ್ಧಪಡಿಸಿದೆ. ಈ ಮಹಾ ಕಾರ್ಯವು ಯಶಸ್ವಿಯಾಗಬೇಕಾದರೆ ಎಲ್ಲಾ ರಾಜ್ಯಗಳಿಂದಲೂ, ಎಲ್ಲಾ ಜನತೆಯಿಂದಲೂ ತುರ್ತಾಗಿ ಉದಾರ ಸಹಾಯ ದೊರೆಯಬೇಕಾಗಿದೆ. ಸರಕಾರದ ಈ ಕಾರ್ಯವನ್ನು ಯಶಸ್ವಿಗೊಳಿಸಲು ಸಹಾಯ ಮಾಡಲು ಸಿ. ಪಿ. ಐ. (ಎಂ) ರಾಜ್ಯಮಟ್ಟದ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಕೆಳಗಿನ ವಿನಂತಿಯನ್ನು ಮಾಡಿದೆ.

"ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತ್ರಿಪುರಾ ರಾಜ್ಯಸಮಿತಿಯು ತ್ರಿಪುರಾ ಪರಿಹಾರ ನಿಧಿಗೆ ಉದಾರ ಸಹಾಯವನ್ನು ನೀಡಿ, ಇತ್ತೀಚಿನ ದೊಂಬಿಯಲ್ಲಿ ಕಷ್ಟನಷ್ಟಗಳಿಗೊಳಗಾದ ಜನತೆಗೆ ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ಕೆ ಸಹಾಯಮಾಡಲು ವಿನಂತಿಸುತ್ತೇನೆ. ಹಣವನ್ನು "ಸ್ರೀಶ್ ಭಟ್ಟಾಚಾರ್ಯ, ಸಿ. ಪಿ. ಐ. (ಎಂ) ಆಫೀಸು, ಬಾಟ್‌ಟಾಲಾ, ಅಗರ್ತಲಾ, ತ್ರಿಪುರಾ" ಇವರ ವಿಳಾಸಕ್ಕೆ ಕಳುಹಿಸಬೇಕು.

ಸಹಿ/-
ಭಾನು ಘೋಷ್
ಕಾರ್ಯದರ್ಶಿ
ಸಿ ಪಿ ಐ.(ಎಂ) ತ್ರಿಪುರಾ ರಾಜ್ಯಸಮಿತಿ

ಸಿ. ಐ. ಟಿ. ಯು. ಕೌನ್ಸಿಲ್ ಸಭೆ

ಜುಲೈ 15ರಂದು ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಲಿ (ಕೌನ್ಸಿಲ್) ಸಭೆಯು ಬೆಂಗಳೂರಿನಲ್ಲಿ ಸೇರಲಿದೆ. ಅಗತ್ಯ ವಿಚಾರಗಳ ಬಗ್ಗೆ ಚರ್ಚಿಸಿ, ತೀರ್ಮಾನಗಳನ್ನು ತೆಗೆದುಕೊಳ್ಳಲಿರುವುದರಿಂದ ಎಲ್ಲಾ ಸದಸ್ಯರುಗಳೂ ತಪ್ಪದೆ ಭಾಗವಹಿಸಬೇಕಾಗಿ ವಿನಂತಿ. ವಸತಿ ವ್ಯವಸ್ಥೆ ಮಾಡಲಾಗುವುದು. ಆದರೆ ಊಟ, ತಿಂಡಿ ವ್ಯವಸ್ಥೆಗಳನ್ನು ಅವರವರೇ ಮಾಡತಕ್ಕದ್ದು.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿ,

ತೋಟ ಕಾರ್ಮಿಕರ ಸಂಘದ ಮಹಾ ಸಭೆ

ಕರ್ನಾಟಕ ತೋಟ ಕಾರ್ಮಿಕರ ಸಂಘದ ವಿಶೇಷ ಮಹಾ ಸಭೆಯು ದಿ. 29-6-1980ರಂದು ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಕಲೇಶಪುರದಲ್ಲಿ ಸೇರಿತು. ಇತ್ತೀಚೆಗೆ ನಿಧನರಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಕುಂಞಂಬು ಮತ್ತು ಮಾಜಿ ರಾಷ್ಟ್ರಾಧ್ಯಕ್ಷರಾದ ವಿ. ವಿ. ಗಿರಿಯವರ ನಿಧನಕ್ಕೆ ಸಭೆಯು ಶ್ರದ್ಧಾಂಜಲಿ ಅರ್ಪಿಸಿತು.

ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಸಭೆಯ ಮುಂದಿಟ್ಟ ವರದಿಯ ಮೇಲೆ ಸದಸ್ಯರನೇಕರು ಚರ್ಚಿಸಿದ ನಂತರ ವರದಿಯು ಸರ್ವಾನುಮತದಿಂದ ಅಂಗೀಕರಿಸಲಾಯ್ತು.

ಸಂಘದ ಮುಖ್ಯ ಕಚೇರಿಯನ್ನು ಅರೇಹಳ್ಳಿಯಿಂದ ಸಕಲೇಶಪುರಕ್ಕೆ ವರ್ಗಾಯಿಸುವುದೆಂದು, ಅರೇಹಳ್ಳಿ ಕಚೇರಿಯನ್ನು ಶಾಖಾ ಕಚೇರಿಯಾಗಿ ಮುಂದುವರಿಸುವುದೆಂದೂ ತೀರ್ಮಾನಿಸಲಾಯ್ತು.

ಸಂಘದ ಉಪಾಧ್ಯಕ್ಷತೆಯ ತೆರವಾದ ಸ್ಥಾನಕ್ಕೆ ಕಾಂ. ಎಂ. ವಿ. ಸುಬ್ಬಯ್ಯನವರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಈ ಕೆಳಕಂಡ ನಿರ್ಣಯಗಳೊಂದಿಗೆ ಸಭೆಯು ಮುಕ್ತಾಯವಾಯ್ತು.

1. ತ್ರಿಪುರ ರಾಜ್ಯದಲ್ಲಿ ಇತ್ತೀಚೆಗೆ ಛಿದ್ರಕಾರಿ ಪ್ರತಿಗಾಮಿ ಶಕ್ತಿಗಳು ಸಾಮ್ರಾಜ್ಯಶಾಹಿ ವಿದೇಶಿ ಶಕ್ತಿಗಳೊಂದಿಗೆ ಸೇರಿ ನಡೆಸಿದ ನರಮೇಧವನ್ನು ಈ ಮಹಾಸಭೆಯು ಉಗ್ರವಾಗಿ ಖಂಡಿಸಿತು. ಈ ದುರ್ಘಟನೆಯಲ್ಲಿ ನೊಂದ ನಿರಾಶ್ರಿತರಿಗೆ ಸಹಾಯ ನೀಡಲು ನಿಧಿ ಸಂಗ್ರಹಿಸುವಂತೆ ಈ ಸಭೆಯು ತೋಟ ಕಾರ್ಮಿಕರಿಗೆ ಕರೆಕೊಟ್ಟಿತು.

2. ಅಸ್ಸಾಂ ರಾಜ್ಯದಲ್ಲಿ ಕಳೆದ 7-8 ತಿಂಗಳಿನಿಂದ ಚಳುವಳಿ ನಡೆಯುತ್ತಿದ್ದು, ಅಲ್ಪಸಂಖ್ಯಾತರಿಗೆ ರಕ್ಷಣೆ ದೊರಕದೆ ಇರುವ, ಈ ಸಮಸ್ಯೆಗೆ ಪರಿಹಾರ ತುರ್ತಾಗಿ ಕಂಡುಬರುತ್ತಿಲ್ಲವಾದ್ದರಿಂದ ಸಭೆಯು ಕಳವಳ ವ್ಯಕ್ತಪಡಿಸಿತು. ಈಶಾನ್ಯ ಭಾರತದಲ್ಲಿ ವಿದೇಶಿ ಸಾಮ್ರಾಜ್ಯಶಾಹಿಗಳ ಪಿತೂರಿಯಿಂದ, ಹಬ್ಬುತ್ತಿರುವ ಪ್ರತ್ಯೇಕತಾವಾದಿ ಚಳುವಳಿಯಿಂದ ರಾಷ್ಟ್ರೀಯ ಸಮಗ್ರತೆಗೆ ಅಪಾಯ ಕಂಡುಬರುತ್ತಿರುವುದರಿಂದ, ಅಸ್ಸಾಂ ಸಮಸ್ಯೆಯನ್ನು ಕೇಂದ್ರಸರ್ಕಾರ ಕೂಡಲೇ ಬಗೆಹರಿಸಬೇಕೆಂದು ಕರೆಕೊಡುತ್ತದೆ.

3. ಅಗತ್ಯ ಸೇವಾಸಂಸ್ಥೆಗಳಲ್ಲಿ ಮುಷ್ಕರ ನಿಷೇಧದ ಮಸೂದೆಯೊಂದನ್ನು ಕರ್ನಾಟಕ ರಾಜ್ಯ ಸರ್ಕಾರ ತರಲು ಪ್ರಯತ್ನಿಸುತ್ತಿರುವುದನ್ನು ಕೂಡಲೇ ಕೈಬಿಡಬೇಕೆಂದೂ, ರಾಜ್ಯ ಸರ್ಕಾರವನ್ನು ಈ ಮಹಾಸಭೆಯು ಒತ್ತಾಯಿಸುತ್ತದೆ.

4. ಐ. ಟಿ. ಸಿ. ಕಾರ್ಮಿಕರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಹಾಗೂ ಸಂಘದ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್‌ನೊಳಗೊಂಡ ಪದಾಧಿಕಾರಿಗಳ ಗಡೀಪಾರು ಮಾಡುವ ಕ್ರಮಕ್ಕೆ ಸಭೆಯು ಉಗ್ರವಾಗಿ ಖಂಡಿಸುತ್ತದೆ.

5. ಕೈಗಾರಿಕಾ ವಿವಾದಗಳಲ್ಲಿ ಪೋಲೀಸರು ಮಾಲೀಕರ ಪರವಹಿಸಿ, ಕಾರ್ಮಿಕರ ಮೇಲೆ ನಡೆಸುವ ದಬ್ಬಾಳಿಕೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT